# ಅಧ್ಯಾಯ–IV

# ಅಭಿವೃದ್ಧಿ ಕಾರ್ಯಗಳ ಅನುಷ್ಠಾನ

# ಅಧ್ಯಾಯ–IV

# ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನ

*ಮಂಡಳಿಯು ಯೋಜಿಸಿ ಕಾರ್ಯಗತಗೊಳಿಸಿದ ಕಾಮಗಾರಿಗಳು ಪ್ರಾದೇಶಿಕ ಅಸಮತೋಲನವನ್ನು ಅಳೆಯಲು ಬಳಸುವ ಸೂಚಕಗಳಿಗೆ ಹೊಂದಿಕೆಯಾಗಲಿಲ್ಲ ಮತ್ತು ರಸ್ತೆ ಸಂಪರ್ಕವನ್ನು ಒದಗಿಸುವಲ್ಲಿ ಹೆಚ್ಚಿನ ಗಮನ ಹರಿಸಿದವು. ಶಿಕ್ಷಣ, ಕೃಷಿ, ಆರೋಗ್ಯ, ಕೌಶಲಾಭಿವೃದ್ಧಿ ಮುಂತಾದ ಕ್ಷೇತ್ರಗಳು ಸೂಕ್ತ ಪ್ರಾಮುಖ್ಯತೆಯನ್ನು ಪಡೆಯಲಿಲ್ಲ. ಭೂಸ್ವಾಧೀನ, ಮಣ್ಣು ಪರೀಕ್ಷೆ ಮುಂತಾದ ಸಮರ್ಪಕ ಪೂರ್ವಸಿದ್ಧತಾ ಕಾರ್ಯಗಳಿಲ್ಲದೆ ಕಾಮಗಾರಿಗಳನ್ನು ಪ್ರಸ್ತಾಪವಿಸಿದ್ದು, ಕಾಮಗಾರಿಗಳ ರದ್ದತಿ, ಕಾಮಗಾರಿಗಳ ಬದಲಾವಣೆ ಹಾಗೂ ಕಾಮಗಾರಿಗಳನ್ನು ವಿಳಂಬವಾಗಿ ಪ್ರಾರಂಭಿಸುವಲ್ಲಿ ಪರಿಣಮಿಸಿತು ಹಾಗೂ ಕಾಮಗಾರಿಗಳು ಸಮಯಕ್ಕೆ ಸರಿಯಾಗಿ ಪೂರ್ಣಗೊಳ್ಳಲಿಲ್ಲ. ಮಂಡಳಿಯ ನಿಧಿಯಿಂದ ರಚಿಸಲಾದ ಸ್ವತ್ತುಗಳ ವಾಸ್ತವವಾದ ಬಳಕೆಯನ್ನು ಮೇಲ್ವಿಚಾರಣೆ ಮಾಡಲು ಮಂಡಳಿಯು ಕಾರ್ಯವಿಧಾನವನ್ನು ರೂಪಿಸದಿದ್ದರ ಪರಿಣಾಮವಾಗಿ ಸೃಜಿಸಲಾದ ಹಲವಾರು ಸ್ವತ್ತುಗಳು ಬಳಕೆಯಾಗದೆ ಉಳಿದಿದ್ದವು.*

ಸರ್ಕಾರಿ ಇಲಾಖೆಗಳು, ಜಿಲ್ಲಾ ಪಂಚಾಯತ್‌ಗಳು, ನಗರ ಸ್ಥಳೀಯ ಸಂಸ್ಥೆಗಳು ಮತ್ತು ಮಾನ್ಯತೆ ಪಡೆದ ಸರ್ಕಾರೇತರ ಸಂಸ್ಥೆಗಳ ಮೂಲಕ ತನ್ನ ಯೋಜನೆಯಲ್ಲಿ ಒಳಗೊಂಡಿರುವ ಯೋಜನೆಗಳ ಅನುಷ್ಠಾನದ ಹೊಣೆಗಾರಿಕೆಯನ್ನು ಮಂಡಳಿ ಆದೇಶ 2013ರ ಸೆಕ್ಷನ್ 16 ಮಂಡಳಿಯ ಮೇಲೆ ನಿಗದಿಪಡಿಸಿದೆ.

## 4.1 ಮಂಡಳಿಯು ಅನುಷ್ಠಾನಗೊಳಿಸಿದ ಕಾಮಗಾರಿಗಳು

ಮಂಡಳಿಯ ವಾರ್ಷಿಕ ಕಾರ್ಯಯೋಜನೆಗಳಲ್ಲಿ ಅನುಮೋದಿಸಲಾದ ಕಾಮಗಾರಿಗಳನ್ನು ಸರ್ಕಾರಿ ಇಲಾಖೆಗಳು ಮತ್ತು ಇತರ ಅನುಷ್ಠಾನ ಸಂಸ್ಥೆಗಳ ಮೂಲಕ ಕಾರ್ಯಗತಗೊಳಿಸಲಾಯಿತು. ಮಂಡಳಿಯು ಪ್ರಾರಂಭವಾದಾಗಿನಿಂದ ಕೈಗೆತ್ತಿಕೊಂಡಿರುವ ಕಾಮಗಾರಿಗಳ ವರ್ಷವಾರು ವಿವರಗಳು ಮತ್ತು ಜುಲೈ 2021 ರಂತೆ ಅವುಗಳ ಸ್ಥಿತಿಯನ್ನು **ಕೋಷ್ಟಕ–4.1**ರಲ್ಲಿ ನೀಡಲಾಗಿದೆ.

**ಕೋಷ್ಟಕ–4.1: ಮಂಡಳಿಯು ಕೈಗೆತ್ತಿಕೊಂಡ ಕಾಮಗಾರಿಗಳ ವರ್ಷಾವಾರು ವಿವರಗಳು**

| ವರ್ಷ | ಕೈಗೆತ್ತಿಕೊಂಡ ಒಟ್ಟು ಕಾಮಗಾರಿಗಳು | ಪೂರ್ಣಗೊಳಿಸಿದ ಕಾಮಗಾರಿಗಳು | ಪ್ರಗತಿಯಲ್ಲಿರುವ ಕಾಮಗಾರಿಗಳು | ಪ್ರಾರಂಭಿಸದ ಕಾಮಗಾರಿಗಳು | ರದ್ದುಗೊಳಿಸಿದ ಕಾಮಗಾರಿಗಳು |
|---|---|---|---|---|---|
| 2013–14 | 782 | 597 | 0 | 0 | 185 |
| 2014–15 | 2,523 | 1,852 | 3 | 0 | 668 |
| 2015–16 | 4,359 | 3,256 | 19 | 0 | 1,084 |
| 2016–17 | 3,547 | 2,893 | 17 | 0 | 637 |
| 2017–18 | 5,142 | 4,351 | 5 | 0 | 736 |
| 2018–19 | 4,377 | 3,799 | 334 | 24 | 220 |
| 2019–20 | 4,239 | 2,729 | 1,106 | 208 | 196 |
| 2020–21 | 2,215 | 43 | 779 | 1,388 | 5 |
| 2021–22 | 854 | 0 | 39 | 815 | 0 |
| **ಒಟ್ಟು ಮೊತ್ತ** | **28,038** | **19,520** | **2,435** | **2,352** | **3,731** |

ಆಧಾರ: ಕೆಕೆಆರ್‌ಡಿಬಿ ಒದಗಿಸಿದ ಹೈಕೋಸಾಫ್ಟ್ ದತ್ತಸಂಚಯ

ಮಂಡಳಿಯು ಕೈಗೆತ್ತಿಕೊಂಡ ಒಟ್ಟು 28,038 ಕಾಮಗಾರಿಗಳ ಪೈಕಿ 2,352 ಕಾಮಗಾರಿಗಳು (ಶೇಕಡಾ ಎಂಟು) ಮಂಜೂರಾಗಿ ಒಂದರಿಂದ ಮೂರು ವರ್ಷ ಕಳೆದರೂ ಪ್ರಾರಂಭಗೊಂಡಿರಲಿಲ್ಲ. ಅಲ್ಲದೆ, ವಾರ್ಷಿಕ ಕಾರ್ಯಯೋಜನೆಗಳಲ್ಲಿ ಅನುಮೋದಿಸಲಾದ ₹738.65 ಕೋಟಿ ಅಂದಾಜು ವೆಚ್ಚದ 3,731 ಕಾಮಗಾರಿಗಳನ್ನು (ಶೇಕಡಾ ಹದಿಮೂರು) 2013–21ರ ಅವಧಿಯಲ್ಲಿ ರದ್ದುಗೊಳಿಸಲಾಗಿತ್ತು. ಯಾವುದೇ ವಾಸ್ತವಿಕ ಅಗತ್ಯತಾ ವಿಶ್ಲೇಷಣೆಯಿಲ್ಲದೆ ಕಾಮಗಾರಿಗಳನ್ನು ಪ್ರಸ್ತಾಪಿಸಲಾಗಿತ್ತು ಮತ್ತು ಹಿಂದುಳಿದ ಪ್ರದೇಶದ ಅಭಿವೃದ್ಧಿಗೆ ಪ್ರಸ್ತಾವಿಸಿದ ಯೋಜನೆಗಳು ನ್ಯೂನತೆಯಿಂದ ಕೂಡಿದ್ದವು ಎಂಬುದನ್ನು ಇದು ಸೂಚಿಸುತ್ತದೆ.

ವಾರ್ಷಿಕ ಕಾರ್ಯಯೋಜನೆಯ ಅನುಮೋದನೆಯ ನಂತರ, ಯೋಜನಾ ನಿವೇಶನಕ್ಕೆ ಸಂಬಂಧಿಸಿದ ಸಮಸ್ಯೆಗಳು, ದಾವೆಗಳು, ಸ್ಥಳೀಯರಿಂದ ಅಸಹಕಾರ, ಕಾಮಗಾರಿಗಳು/ಏಜೆನ್ಸಿಗಳ ಪರಸ್ಪರ ವ್ಯಾಪಿಸುವಿಕೆ ಇತ್ಯಾದಿ ಕಾರಣಗಳನ್ನು ಉಲ್ಲೇಖಿಸಿ ಕಾಮಗಾರಿಗಳ ಬದಲಾವಣೆಗಾಗಿ ಮಂಡಳಿಯು ವಿನಂತಿಗಳನ್ನು ಸ್ವಿಕರಿಸಿತ್ತು ಎಂದು ಮಂಡಳಿಯು ಉತ್ತರಿಸಿತು (ಜುಲೈ 2022). ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಅಗತ್ಯತೆಗಳು ಮತ್ತು ಕಾರ್ಯಸಾಧ್ಯತೆಯನ್ನು ಪರಿಗಣಿಸಿ ಕಾರ್ಯಯೋಜನೆಗಳನ್ನು ಅನುಮೋದಿಸ ಬೇಕಾಗಿರುವುದರಿಂದ ಕಾರ್ಯಗತಗೊಳಿಸಲು ಕಾಮಗಾರಿಗಳನ್ನು ಪ್ರಸ್ತಾವಿಸುವ ಮೊದಲು ಸಾಕಷ್ಟು ಪೂರ್ವ–ಯೋಜನೆಯ ಅಗತ್ಯತೆಯನ್ನು ಎತ್ತಿ ತೋರಿಸುತ್ತದೆ.

## 4.2 ಕಾಮಗಾರಿಗಳ ಅನುಷ್ಠಾನದಲ್ಲಿ ನ್ಯೂನತೆಗಳು

24,307 ಕಾಮಗಾರಿಗಳಲ್ಲಿ ಲೆಕ್ಕಪರಿಶೋಧನೆಯು 601 ಕಾಮಗಾರಿಗಳ ಅನುಷ್ಠಾನವನ್ನು ಪರೀಕ್ಷಾ–ತನಿಖೆ ಮಾಡಿತು. ಮಂಡಳಿಯಿಂದ ಕಾಮಗಾರಿಗಳ ಅನುಷ್ಠಾನದಲ್ಲಿ ಕಂಡುಬಂದಿರುವ ನ್ಯೂನತೆಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

### *4.2.1 ಟೆಂಡರ್‌ಗಳನ್ನು ಸಲ್ಲಿಸಲು ನೀಡಿದ್ದ ಅಸಪರ್ಪಕ ಸಮಯಾವಕಾಶ*

ಕರ್ನಾಟಕ ಸಾರ್ವಜನಿಕ ಖರೀದಿಯಲ್ಲಿ ಪಾರದರ್ಶಕತೆ ಕಾಯಿದೆ ಮತ್ತು ನಿಯಮಗಳ ಸೆಕ್ಷನ್ 17ರ ಪ್ರಕಾರ ₹ ಒಂದು ಕೋಟಿಗೂ ಹೆಚ್ಚು ವೆಚ್ಚದ ಕಾಮಗಾರಿಗಳಿಗೆ ಗುತ್ತಿಗೆದಾರರಿಗೆ ಟೆಂಡರ್ ಸಲ್ಲಿಸಲು ಕನಿಷ್ಠ 30 ದಿನಗಳ ಕಾಲಾವಕಾಶ ನೀಡಬೇಕು. ಟೆಂಡರ್‌ಗಳನ್ನು ಸಲ್ಲಿಸಲು ಸಾಕಷ್ಟು ಸಮಯವನ್ನು ನೀಡಲಾಗಿದೆ ಮತ್ತು ಟೆಂಡರ್‌ಗಳನ್ನು ಆಹ್ವಾನಿಸುವ ಪ್ರಕಟಣೆಯ ದಿನಾಂಕ ಮತ್ತು ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ನಡುವೆ ಕನಿಷ್ಠ ಸಮಯವನ್ನು ಅನುಮತಿಸಲಾಗಿದೆ ಎಂಬುದನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರವು ಖಚಿತಪಡಿಸಿಕೊಳ್ಳಬೇಕು. ಈ ಕನಿಷ್ಠ ಅವಧಿಯು ಜನವರಿ 2019ರವರೆಗೆ ಈ ಕೆಳಗಿನಂತಿತ್ತು:

- ₹ ಎರಡು ಕೋಟಿಯವರೆಗಿನ ಮೌಲ್ಯದ ಟೆಂಡರ್‌ಗಳಿಗೆ 30 ದಿನಗಳು, ಮತ್ತು
- ₹ ಎರಡು ಕೋಟಿಗೂ ಅಧಿಕ ಮೌಲ್ಯದ ಟೆಂಡರ್‌ಗಳಿಗೆ 60 ದಿನಗಳು,

ನಿಗದಿತ ಸಮಯದಲ್ಲಿನ ಯಾವುದೇ ಕಡಿತವನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕಿಂತ ಹೆಚ್ಚಿನ ಅಧಿಕಾರ ಹೊಂದಿರುವ ಪ್ರಾಧಿಕಾರದಿಂದ ಕಾರಣಗಳನ್ನು ಲಿಖಿತವಾಗಿ ದಾಖಲಿಸಿ ನಿರ್ದಿಷ್ಟವಾಗಿ ಅಧಿಕೃತ ಗೊಳಿಸಬೇಕು. ಕನಿಷ್ಠ ಅವಧಿಯನ್ನು ಅನುಮತಿಸದೆ ಮಂಡಳಿಯು ಟೆಂಡರ್‌ಗಳನ್ನು ಆಹ್ವಾನಿಸಿತ್ತು ಎಂಬುದನ್ನು ಮಂಡಳಿಯ ಟೆಂಡರ್‌ಗಳ ವಿಶ್ಲೇಷಣೆಯು ತಿಳಿಯಪಡಿಸಿತು. ಮಂಡಳಿಯು ನೇರವಾಗಿ ಅನುಷ್ಠಾನಗೊಳಿಸಿದ 278 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಬಿಡ್‌ಗಳನ್ನು ಸಲ್ಲಿಸಲು ಅನುಮತಿಸಲಾದ ಸಮಯದ ವಿವರಗಳನ್ನು **ಕೋಷ್ಟಕ–4.2**ರಲ್ಲಿ ನೀಡಲಾಗಿದೆ:

**ಕೋಷ್ಟಕ–4.2: ಮಂಡಳಿಯ ಮುಖ್ಯ ಕಛೇರಿಯು ಕೈಗೆತ್ತಿಕೊಂಡ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ನೀಡಿದ್ದ ಸಮಯಾವಕಾಶ**

| ಕಾಮಗಾರಿಗಳ ಸಂಖ್ಯೆ | ಟೆಂಡರ್ ಸಲ್ಲಿಸಲು ನೀಡಿದ್ದ ಸಮಯಾವಕಾಶ |
|---|---|
| 97 | 10 ದಿನಗಳವರೆಗೆ |
| 165 | 11ರಿಂದ 20 ದಿನಗಳವರೆಗೆ |
| 11 | 21ರಿಂದ 30 ದಿನಗಳವರೆಗೆ |
| 5 | 30 ದಿನಗಳಿಗೂ ಹೆಚ್ಚು |

ಆಧಾರ: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್

ಹೀಗೆ, ಹೆಚ್ಚಿನ ಸಂದರ್ಭಗಳಲ್ಲಿ, ಟೆಂಡರ್‌ಗೆ ಅನುಮತಿಸಲಾದ ಸಮಯವು ಕೆಟಿಪಿಪಿ ಕಾಯ್ದೆಯಡಿ ನಿಗದಿಪಡಿಸಿದ ಸಮಯಕ್ಕಿಂತ ಕಡಿಮೆಯಿರುವುದನ್ನು ಗಮನಿಸಬಹುದು. ಅಲ್ಪಾವಧಿಯ ಟೆಂಡರ್‌ಗಳು ಟೆಂಡರ್‌ಗಳ ಭಾಗವಹಿಸುವಿಕೆಯನ್ನು ಸೀಮಿತಗೊಳಿಸುವ ಸಂಭಾವ್ಯತೆಯನ್ನು ಹೊಂದಿವೆ.

### *4.2.2 ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತದಿಂದ ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿ ನೀಡುವಲ್ಲಿ ವಿಳಂಬ*

ಕೈಗೊಳ್ಳಲು ಉದ್ದೇಶಿಸಲಾಗಿರುವ ನಿರ್ಮಾಣ ಅಥವಾ ದುರಸ್ತಿ ಕಾಮಗಾರಿಯ ಸಮರ್ಪಕವಾದ ವಿವರವಾದ ಅಂದಾಜನ್ನು ಮಂಜೂರು ಮಾಡುವ ಸಕ್ಷಮ ಪ್ರಾಧಿಕಾರದ ಆದೇಶವು ತಾಂತ್ರಿಕ ಮಂಜೂರಾತಿಯಾಗಿರುತ್ತದೆ.

ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ (ಕೆಆರ್‌ಐಡಿಎಲ್) ವಹಿಸಲಾಗಿರುವ 40 ಕಾಮಗಾರಿಗಳ ಲೆಕ್ಕಪರಿಶೋಧನಾ ವಿಶ್ಲೇಷಣೆಯು ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿ ನೀಡುವಲ್ಲಿ ಅಸಾಮಾನ್ಯ ವಿಳಂಬವಾಗಿರುವುದನ್ನು ತಿಳಿಯಪಡಿಸಿತು. ವಹಿಸಿದ್ದ 16 ಕಾಮಗಾರಿಗಳಲ್ಲಿ ತಾಂತ್ರಿಕ ಮಂಜೂರಾತಿಯನ್ನು ನೀಡುವಲ್ಲಿ 133 ದಿನಗಳಿಂದ 1430 ದಿನಗಳ ವ್ಯಾಪ್ತಿಯ ವಿಳಂಬವನ್ನು ಗಮನಿಸಲಾಯಿತು (**ಅನುಬಂಧ 4.1**). ಕೆಲವು ಸಂದರ್ಭಗಳಲ್ಲಿ, ಕಾಮಗಾರಿ ಪೂರ್ಣಗೊಂಡ ನಂತರ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿತ್ತು. ಏಜೆನ್ಸಿಗೆ ಮುಂಗಡವಾಗಿ ಹಣವನ್ನು ಬಿಡುಗಡೆ ಮಾಡುವ ಮೊದಲು ತಾಂತ್ರಿಕ ಮಂಜೂರಾತಿಯನ್ನು ಪಡೆಯಲಾಗಿದೆ ಎಂಬುದನ್ನು ಮಂಡಳಿಯು ಖಚಿತ ಪಡಿಸಿಕೊಂಡಿರಲಿಲ್ಲ.


### *4.2.3 ಕಾರ್ಯಯೋಜನಾ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬಗಳು*

ಉದ್ದೇಶಿತ ಜನರಿಗೆ ಪ್ರಯೋಜನಗಳು ಲಭ್ಯವಾಗುವಂತೆ ಮಾಡಲು ಯೋಜಿತ ಕಾಮಗಾರಿಗಳನ್ನು ಸಮಯೋಚಿತವಾಗಿ ಪೂರ್ಣಗೊಳಿಸುವುದು ಮುಖ್ಯವಾಗಿದೆ. ಕಾಮಗಾರಿಗಳ ಅನುಷ್ಠಾನದಲ್ಲಿ ವಿಳಂಬವಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

2013–14 ಮತ್ತು 2020–21ರ ಅವಧಿಯಲ್ಲಿ 28,038 ಕಾಮಗಾರಿಗಳಲ್ಲಿ, ಜೂನ್ 2021ರಲ್ಲಿದ್ದಂತೆ ಒಟ್ಟು 19,520 ಕಾಮಗಾರಿಗಳನ್ನು ಪೂರ್ಣಗೊಳಿಸಿದೆ ಎಂದು ಮಂಡಳಿಯ ತನ್ನ ದಾಖಲೆಗಳಲ್ಲಿ ತೋರಿಸಿತ್ತು. ಪೂರ್ಣಗೊಳಿಸಬೇಕಿದ್ದ ನಿಗದಿತ ದಿನಾಂಕಗಳು ಮತ್ತು ವಾಸ್ತವವಾಗಿ ಪೂರ್ಣಗೊಂಡ ದಿನಾಂಕಗಳ ದತ್ತಾಂಶಗಳನ್ನು ಹೈಕಾಸಾಫ್ಟ್ ಅಪ್ಲಿಕೇಶನ್‌ನಲ್ಲಿ ಇಂದೀಕರಿಸಿರಲಿಲ್ಲವಾಗಿ ಸಂಪೂರ್ಣ ವಿಶ್ಲೇಷಣೆಗೆ ಸಹಾಯಕವಾಗಲಿಲ್ಲ.

ಪರೀಕ್ಷಾ–ತನಿಖೆ ನಡೆಸಿದ 601 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸಂಗ್ರಹಿಸಿದ ಮಾಹಿತಿಯ ವಿಶ್ಲೇಷಣೆಯು ಕೇವಲ 36 ಕಾಮಗಾರಿಗಳನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲಾಗಿತ್ತು ಮತ್ತು ಉಳಿದ 565 ಕಾಮಗಾರಿಗಳನ್ನು, **ನಕ್ಷೆ–4.1**ರಲ್ಲಿ ತೋರಿಸಿರುವಂತೆ, ಒಂದರಿಂದ ಆರು ವರ್ಷಗಳ ವ್ಯಾಪ್ತಿಯ ವಿಳಂಬದೊಂದಿಗೆ ಪೂರ್ಣಗೊಳಿಸಲಾಗಿತ್ತು ಎಂಬುದನ್ನು ತಿಳಿಯಪಡಿಸಿತು:

**ನಕ್ಷೆ–4.1: ಕಾಮಗಾರಿಗಳನ್ನು ಪೂರ್ಣಗೊಳಿಸಲು ತೆಗೆದುಕೊಂಡ ಸಮಯ**




ಆಧಾರ: ಮಂಡಳಿಯು ಒದಗಿಸಿದ ಮಾಹಿತಿ

**ಕೋಷ್ಟಕ–4.3**ರಲ್ಲಿ ವಿವರಿಸಿದಂತೆ ಆಡಳಿತಾತ್ಮಕ ಅನುಮೋದನೆ, ತಾಂತ್ರಿಕ ಮಂಜೂರಾತಿ, ಟೆಂಡರ್ ಪ್ರಕ್ರಿಯೆ, ಕಾಮಗಾರಿ ಆದೇಶ, ಇತ್ಯಾದಿಗಳನ್ನು ನೀಡುವಲ್ಲಿನ ವಿಳಂಬಗಳು ಕಾಮಗಾರಿಗಳ ಅನುಷ್ಠಾನದಲ್ಲಿನ ವಿಳಂಬಕ್ಕೆ ಕಾರಣವಾಗಿತ್ತು:

**ಕೋಷ್ಟಕ–4.3: ಕಾಮಗಾರಿಗಳ ವಿಳಂಬವಾಗಿ ಪೂರ್ಣಗೊಳ್ಳುವುದಕ್ಕೆ ಅಧ್ಯಾರೋಪಿಸಿದ ಕಾರಣಗಳು**

| ವಿವರಣೆ | 31 ರಿಂದ 60 ದಿನಗಳು | 61 ರಿಂದ 90 ದಿನಗಳು | 91 ರಿಂದ 180 ದಿನಗಳು | 180 ದಿನಗಳಿಗೂ ಮೇಲ್ಪಟ್ಟು | ಒಟ್ಟು |
|---|---|---|---|---|---|
| ಆಡಳಿತಾತ್ಮಕ ಅನುಮೋದನೆ ನೀಡುವಲ್ಲಿ | 132 | 88 | 134 | 97 | 451 |
| ತಾಂತ್ರಿಕ ಮಂಜೂರಾತಿ ನೀಡುವಲ್ಲಿ | 89 | 54 | 52 | 50 | 245 |
| ಕಾಮಗಾರಿಗಳನ್ನು ಟೆಂಡರ್ ಮಾಡುವಲ್ಲಿ | 45 | 25 | 37 | 19 | 126 |
| ಕಾಮಗಾರಿ ಆದೇಶಗಳನ್ನು ನೀಡುವಲ್ಲಿ | 56 | 25 | 42 | 26 | 149 |

ಆಧಾರ: ಮಂಡಳಿಯು ಒದಗಿಸಿದ ಹೈಕೋಸಾಫ್ಟ್ ದತ್ತಾಂಶದ ವಿಶ್ಲೇಷಣೆ

*ನಿದರ್ಶನ*

***ಚಿಂಚೋಳಿ ತಾಲ್ಲೂಕಿನ ಕೊಂಚಾವರಂ ಗ್ರಾಮದ ಸರ್ಕಾರಿ ಆರೋಗ್ಯ ಕೇಂದ್ರದ ಕಟ್ಟಡಕ್ಕೆ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಕಾಮಗಾರಿ ಅಪೂರ್ಣಗೊಂಡಿದ್ದು ₹8 ಲಕ್ಷ ವೆಚ್ಚ ಫಲಪ್ರದವಾಗಲಿಲ್ಲ.***

*ಕಲಬುರಗಿಯ ಕೆಆರ್ಐಡಿಎಲ್‌ನಿಂದ ಚಿಂಚೋಳಿ ತಾಲೂಕಿನ ಕೊಂಚಾವರಂ ಗ್ರಾಮದಲ್ಲಿರುವ ಸರಕಾರಿ ಆರೋಗ್ಯ ಕೇಂದ್ರದ ಕಟ್ಟಡಕ್ಕೆ ಹೆಚ್ಚುವರಿ ಕೊಠಡಿಗಳ ಕಟ್ಟಡ ಕಾಮಗಾರಿ 2019ರ ಮೇ ತಿಂಗಳಿನಲ್ಲಿ ಆರಂಭವಾಗಿ ಲಿಂಟಲ್ ಹಂತದವರೆಗೆ ಮಾತ್ರ ನಿರ್ಮಾಣಗೊಂಡಿರುವುದನ್ನು ಜಂಟಿ ಭೌತಿಕ ಪರಿಶೀಲನೆಯಲ್ಲಿ ಗಮನಿಸಲಾಯಿತು. ಹೀಗೆ, ಮೂರು ವರ್ಷಗಳಿಂದ ಕಾಮಗಾರಿ ಸ್ಥಗಿತಗೊಂಡಿದ್ದರಿಂದ ₹0.08 ಕೋಟಿ ವೆಚ್ಚ ಫಲಪ್ರದವಾಗಲಿಲ್ಲ.*

***ಪ್ರದರ್ಶಿಕೆ–4.1: ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಕೊಂಚಾವರಂ ಗ್ರಾಮದ ಆರೋಗ್ಯ ಕೇಂದ್ರದ ಅಪೂರ್ಣ ಕಾಮಗಾರಿಗಳು***





ಅಗತ್ಯವಿರುವ ನಿವೇಶನ ಲಭ್ಯವಿಲ್ಲದಿರುವುದು, ಜಿಲ್ಲಾಡಳಿತದ ಮಟ್ಟದಲ್ಲಿ ಏಜೆನ್ಸಿಯ ಬದಲಾವಣೆ, ಸ್ಥಳೀಯ ಜನರ ಆಕ್ಷೇಪಣೆಗಳು ಮತ್ತು ವಿರೋಧಗಳು, ಕೋವಿಡ್ ಸಾಂಕ್ರಾಮಿಕ ರೋಗ, ಭಾರೀ ಮಳೆ ಇತ್ಯಾದಿಗಳಿಂದಾಗಿ ಕಾಮಗಾರಿಯನ್ನು ಪೂರ್ಣಗೊಳಿಸುವಲ್ಲಿ ವಿಳಂಬವಾಗಿದೆ ಮತ್ತು ಜಿಲ್ಲಾಧಿಕಾರಿ/ಸಿಇಒ ರವರಿಗೆ ಕಾಮಗಾರಿಗಳನ್ನು ಕಾಲಕಾಲಕ್ಕೆ ಪರಿಶೀಲಿಸುವಂತೆ ಸೂಚಿಸಲಾಗಿದೆ ಎಂದು ಮಂಡಳಿಯು ಉತ್ತರಿಸಿತು (ಜುಲೈ 2022). ಅನುಷ್ಠಾನಗೊಳಿಸುವ ಏಜೆನ್ಸಿಗಳಿಂದ ಕಾಮಗಾರಿಗಳ ವಿಳಂಬವನ್ನು ತಡೆಯಲು ದಂಡದ ನಿಬಂಧನೆಗಳನ್ನು ಪರಿಚಯಿಸಲಾಗುವುದು ಮತ್ತು ಟೆಂಡರ್ ಷರತ್ತುಗಳ ಪ್ರಕಾರ ಗುತ್ತಿಗೆದಾರರಿಗೆ ದಂಡವನ್ನು ವಿಧಿಸಲಾಗುವುದು ಎಂದು ಸರ್ಕಾರವು ನಿರ್ಗಮನ ಸಭೆಯಲ್ಲಿ ತಿಳಿಸಿತು.

### *4.2.4 ಅನುಷ್ಠಾನ ಏಜೆನ್ಸಿಗಳ ಜೊತೆ ಒಪ್ಪಂದದ ಅನುಪಸ್ಥಿತಿ*

ಕಾಮಗಾರಿಯ ಪ್ರಗತಿಯ ಮೇಲ್ವಿಚಾರಣೆಗೆ ಕಾಮಗಾರಿಯ ವಹಿಸುವಿಕೆಯಿಂದ ಪೂರ್ಣಗೊಳಿಸುವ ಮತ್ತು ಹಸ್ತಾಂತರಿಸುವವರೆಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಾಲಮಿತಿಗಳನ್ನು ನಿಗದಿಪಡಿಸ ಬೇಕಾಗುತ್ತದೆ. ಕಾಮಗಾರಿಯ ವಹಿಸುವಿಕೆಯಿಂದ ಅಂತಿಮವಾಗಿ ಪೂರ್ಣಗೊಳ್ಳುವವರೆಗೆ ಅನುಸರಿಸಬೇಕಾದ ಯಾವುದೇ ಸಮಯಾವಧಿಯನ್ನು ಅನುಷ್ಠಾನ ಏಜೆನ್ಸಿಗಳಿಗೆ ನಿಗದಿಪಡಿಸಿರಲಿಲ್ಲ.

ಮಂಡಳಿಯು ವಹಿಸಿಕೊಡುವ ಕಾಮಗಾರಿಗಳ ಅನುಷ್ಠಾನದಲ್ಲಿ ನಿಯಮಗಳು. ಷರತ್ತುಗಳು ಮತ್ತು ಹೊಣೆಗಾರಿಕೆಗಳನ್ನು ವಿವರಿಸುವ ಯಾವುದೇ ಸಾಮಾನ್ಯ/ವಿಶೇಷ ಒಪ್ಪಂದ/ಪರಸ್ಪರ ತಿಳುವಳಿಕೆ ಪತ್ರವನ್ನು ಸಿದ್ಧಪಡಿಸಿರಲಿಲ್ಲ.

> ***ನಿದರ್ಶನ***
>
> *ಮಂಡಳಿಯು ಕಲಬುರಗಿ ಮತ್ತು ರಾಯಚೂರಿನ ಕೆಆರ್‌ಐಡಿಎಲ್ ವಿಭಾಗಗಳಿಗೆ ವಹಿಸಿಕೊಟ್ಟಿರುವ 40 ಮಾದರಿ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಸಮಯಾವಧಿಯನ್ನು ನಿಗದಿಪಡಿಸುವ ಯಾವುದೇ ಒಪ್ಪಂದ/ಪರಸ್ಪರ ತಿಳುವಳಿಕೆ ಪತ್ರಗಳನ್ನು ಜಾರಿಗೊಳಿಸದೇ ಮುಂಗಡ ಪಾವತಿಗಳನ್ನು ಮಾಡಿತ್ತು ಎಂಬುದನ್ನು ಈ ಕಾಮಗಾರಿಗಳ ಲೆಕ್ಕಪರಿಶೋಧನಾ ವಿಶ್ಲೇಷಣೆಯು ತಿಳಿಯಪಡಿಸಿತು. ತತ್ಪರಿಣಾಮವಾಗಿ 31 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕಾಮಗಾರಿ ಆದೇಶ ಜಾರಿಗೊಳಿಸಿದ ದಿನಾಂಕದಿಂದ ಒಂದರಿಂದ ಐದು ವರ್ಷಗಳವರೆಗಿನ ವ್ಯಾಪ್ತಿಯ ಅಸಾಮಾನ್ಯ ವಿಳಂಬವಿದ್ದಿತು.*

ನಿರ್ಗಮನ ಸಭೆಯ ಸಮಯದಲ್ಲಿ ಲೆಕ್ಕಪರಿಶೋಧನಾ ಆಕ್ಷೇಪಣೆಯನ್ನು ಒಪ್ಪಿಕೊಳ್ಳುತ್ತಾ ಸರ್ಕಾರವು ಇಲಾಖೆಗಳು/ಏಜೆನ್ಸಿಗಳು ಅನುಸರಿಸಬೇಕಾದ ಕಾಲಮಿತಿಯನ್ನು ಸೂಚಿಸಿ ಅನುಷ್ಠಾನ ಏಜೆನ್ಸಿಗಳೊಂದಿಗೆ ಒಪ್ಪಂದವನ್ನು ಕಾರ್ಯಗತಗೊಳಿಸಲಾಗುವುದು ಎಂದು ತಿಳಿಸಿತು.

### *4.2.5 ಋಣವಿಮೋಚನಾ ಹಾನಿಗಳ ಕಡಿಮೆ ವಸೂಲಾತಿ*

ಉದ್ದೇಶಿತ ಪೂರ್ಣಗೊಳಿಸುವ ದಿನಾಂಕಕ್ಕಿಂತ ವಾಸ್ತವವಾಗಿ ಪೂರ್ಣಗೊಳಿಸುವ ದಿನಾಂಕವು ನಂತರವಾಗಿದ್ದಲ್ಲಿ ಪ್ರತಿ ದಿನಕ್ಕೆ ಒಪ್ಪಂದದಲ್ಲಿ ತಿಳಿಸಿರುವ ದರದಲ್ಲಿ ಗುತ್ತಿಗದಾರನು ಉದ್ಯೋಗದಾತರಿಗೆ ಋಣವಿಮೋಚನಾ ಹಾನಿಯನ್ನು ಪಾವತಿಸಬೇಕು ಎಂದು ಒಪ್ಪಂದ[16] 16ರ ಷರತ್ತುಗಳ 36.1 ಮತ್ತು 41 ಅನುಚ್ಛೇದಗಳು ನಿಗದಿಪಡಿಸುತ್ತವೆ (ಪೂರ್ಣ ಕಾಮಗಾರಿಗೆ ಅಥವಾ ಅಥವಾ ಒಪ್ಪಂದದಲ್ಲಿ ಹೇಳಿರುವಂತೆ ಮೈಲಿಗಲ್ಲು). ಒಪ್ಪಂದದ ಅಂಕಿಅಂಶಗಳ ಪ್ರಕಾರ, ವಿಳಂಬಕ್ಕಾಗಿ ಋಣವಿಮೋಚನಾ ಹಾನಿಯನ್ನು ದಿನಕ್ಕೆ ಒಪ್ಪಂದದ ಬೆಲೆಯ ಶೇಕಡಾ 0.1ರಂತೆ ಲೆಕ್ಕ ಹಾಕಬೇಕಿತ್ತು. ಇದು ಅಂತಿಮ ಒಪ್ಪಂದದ ಬೆಲೆಯ ಶೇಕಡಾ ಹತ್ತರಷ್ಟು ಗರಿಷ್ಠ ಮೊತ್ತದ ಋಣವಿಮೋಚನಾ ಹಾನಿಗಳಿಗೆ ಸೀಮಿತವಾಗಿರುತ್ತದೆ.

ಎಂಟು ಅನುಷ್ಠಾನ ಏಜೆನ್ಸಿಗಳ ಮೂಲಕ ಕಾರ್ಯಗತಗೊಳಿಸಿದ 22 ಕಾಮಗಾರಿಗಳಿಗೆ ಸಂಬಂಧಿಸಿದಂತೆ ₹3.25 ಕೋಟಿ ಮೊತ್ತದ ನಿಗದಿತ ಋಣವಿಮೋಚನಾ ಹಾನಿಯ ಕಡಿಮೆ ವಸೂಲಾತಿಯ/ವಸೂಲಾಗದ ನಿದರ್ಶನಗಳಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕಾಮಗಾರಿವಾರು ವಿವರಗಳನ್ನು **ಅನುಬಂಧ–4.2**ರಲ್ಲಿ ನೀಡಲಾಗಿದೆ.

ಏಳು ಕಾಮಗಾರಿಗಳಿಗೆ ಸಂಬಂಧಿಸಿದಂತೆ ವಿಳಂಬಕ್ಕೆ ಗುತ್ತಿಗೆದಾರರೇ ಕಾರಣರಾಗಿದ್ದರೂ ಸಹ ಅನುಷ್ಠಾನ ಏಜೆನ್ಸಿಗಳು ಸಮರ್ಥನೆಯಿಲ್ಲದೇ ಸಮಯ ವಿಸ್ತರಣೆಗೆ ಅನುಮೋದನೆ ನೀಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ವಿಳಂಬಗಳನ್ನು ಗಮನಿಸಿದಾಗ ದಂಡವನ್ನು ವಿಧಿಸಲಾಗುತ್ತಿದೆ ಎಂದು ಮಂಡಳಿಯು ತಿಳಿಸಿತು. ಒಪ್ಪಂದದಲ್ಲಿ ನಿಗದಿಪಡಿಸಿದ ಷರತ್ತುಗಳ ಪ್ರಕಾರ ಅನುಷ್ಠಾನ ಮಾಡುವ ಏಜೆನ್ಸಿಗಳು ದಂಡವನ್ನು ವಿಧಿಸದ ಕಾರಣ ಉತ್ತರವನ್ನು ಒಪ್ಪಲಾಗುವುದಿಲ್ಲ., ಒಪ್ಪಂದದ ಷರತ್ತುಗಳಿಗೆ ಅನುಗುಣವಾಗಿ ದಂಡವನ್ನು ವಿಧಿಸಲಾಗುವುದು ಎಂದು ನಿರ್ಗಮನ ಸಭೆಯಲ್ಲಿ ಸರ್ಕಾರವು ತಿಳಿಸಿತು.

[16] ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಅಪ್‌ಲೋಡ್ ಮಾಡಲು ಕರ್ನಾಟಕ ಸರ್ಕಾರವು ನೀಡಿರುವ ಒಪ್ಪಂದದ ಪ್ರಮಾಣಿತ ರೂಪಗಳು.

### *4.2.6 ಕಾಮಗಾರಿಗಳ ಸಂಶಯಾಸ್ಪದ ಪೂರ್ಣಗೊಳಿಸುವಿಕೆ*

ಮಂಡಳಿಯು ಒದಗಿಸಿದ ಮಾಹಿತಿಯ ಪ್ರಕಾರ, 2013–14ರಿಂದ 2020–21ರ ಅವಧಿಯಲ್ಲಿ ಒಟ್ಟು 19,520 ಕಾಮಗಾರಿಗಳು ಪೂರ್ಣಗೊಂಡಿವೆ ಎಂದು ದಾಖಲಿಸಲಾಗಿದೆ. ಪೂರ್ಣಗೊಂಡಿವೆ ಎಂದು ದಾಖಲಿಸಿರುವ ಈ ಕಾಮಗಾರಿಗಳ ವೆಚ್ಚವು ಅಂದಾಜು ವೆಚ್ಚಕ್ಕೆ ಅನುಗುಣವಾಗಿಲ್ಲದಿರುವುದನ್ನು ಮತ್ತು ಅದು ಶೇಕಡಾ 0ಯಿಂದ 75ರ ವ್ಯಾಪ್ತಿಯಲ್ಲಿರುವುದನ್ನು ಈ ಕಾಮಗಾರಿಗಳಿಗೆ ಸಂಬಂಧಿಸಿದ ಪ್ರಗತಿ ವರದಿಗಳ ಪರಿಶೀಲನೆಯು ತಿಳಿಯಪಡಿಸಿತು. **ಕೋಷ್ಟಕ–4.4**ರಲ್ಲಿ ತೋರಿಸಿರುವಂತೆ, ಪೂರ್ಣಗೊಂಡಿವೆ ಎಂದು ದಾಖಲಿಸಿದ ಕಾಮಗಾರಿಗಳ ಸಂಖ್ಯೆ ಮತ್ತು ಭರಿಸಿದ ವೆಚ್ಚದ ಶೇಕಡಾವಾರು ಅಂದಾಜು ವೆಚ್ಚಕ್ಕಿಂತ ಸಾಕಷ್ಟು ಕಡಿಮೆಯಿದ್ದಿತು.

**ಕೋಷ್ಟಕ–4.4: ಅಂದಾಜು ವೆಚ್ಚಕ್ಕಿಂತ ಕಡಿಮೆ ವೆಚ್ಚದಲ್ಲಿ ಪೂರ್ಣಗೊಂಡಿದೆ ಎಂದು ದಾಖಲಿಸಲಾದ ಕಾಮಗಾರಿಗಳು**

| ವರ್ಷ | (ಕಾಮಗಾರಿಗಳ ಸಂಖ್ಯೆ) | | | |
|---|---|---|---|---|
| | ಕಾಮಗಾರಿಗಳಿಗೆ ಮಾಡಿದ ವೆಚ್ಚದ ಶೇಕಡಾವಾರು | | | |
| | ಸೊನ್ನೆ | 0 ಯಿಂದ 25 | 25 ರಿಂದ 50 | 50 ರಿಂದ 75 |
| 2013–14 | 0 | 4 | 15 | 58 |
| 2014–15 | 8 | 4 | 45 | 147 |
| 2015–16 | 27 | 13 | 81 | 265 |
| 2016–17 | 10 | 20 | 91 | 349 |
| 2017–18 | 21 | 35 | 118 | 739 |
| 2018–19 | 23 | 15 | 120 | 563 |
| 2019–20 | 60 | 22 | 98 | 413 |
| 2020–21 | 5 | 1 | 14 | 7 |
| **ಒಟ್ಟು** | **154** | **114** | **582** | **2,541** |

ಆಧಾರ: ಮಂಡಳಿಯು ಒದಗಿಸಿದ ಹೈಕೋಸಾಫ್ಟ್ ದತ್ತಾಂಶ

154 ಕಾಮಗಾರಿಗಳನ್ನು 'ಶೂನ್ಯ' ವೆಚ್ಚದಲ್ಲಿ ಪೂರ್ಣಗೊಳಿಸಲಾಗಿದೆ ಎಂದು ತೋರಿಸಿದ್ದರೆ 114 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಭರಿಸಲಾದ ವೆಚ್ಚದ ಶೇಕಡಾವಾರು ಪ್ರಮಾಣವು ಅವುಗಳ ಅಂದಾಜು ವೆಚ್ಚಕ್ಕೆ ಪ್ರತಿಯಾಗಿ 0 ಮತ್ತು 25ರ ನಡುವೆ ಇರುವುದನ್ನು ಮೇಲಿನ ಮೇಲಿನ ಕೋಷ್ಟಕದಿಂದ ಗಮನಿಸಬಹುದು. ಈ ಕಾಮಗಾರಿಗಳಿಗೆ ಪ್ರತಿಯಾಗಿ ಭರಿಸಿದ ಅತ್ಯಲ್ಪ ವೆಚ್ಚವನ್ನು ಪರಿಗಣಿಸಿದಾಗ, ಈ ಕಾಮಗಾರಿಗಳನ್ನು ಸಂಪೂರ್ಣವಾಗಿ ಪೂರ್ಣಗೊಳಿಸಲಾಗಿದೆ ಎನ್ನುವುದು ತಪ್ಪಾದ ವರದಿಯಾಗಿದೆ.

**ಪ್ರದರ್ಶಿಕೆ–4.2: ಪೂರ್ಣಗೊಂಡಿದೆ ಎಂದು ವರದಿ ಮಾಡಿರುವ ಅಪೂರ್ಣ ರಸ್ತೆ ಕಾಮಗಾರಿ**





ಜುಲೈ 2022 ರಲ್ಲಿದ್ದಂತೆ, ಭೌತಿಕವಾಗಿ ಪೂರ್ಣಗೊಂಡ ಆದರೆ ಶೂನ್ಯ ವೆಚ್ಚದ ಕಾಮಗಾರಿಗಳು 150 ಆಗಿದ್ದು ಅವುಗಳಲ್ಲಿ 129 ಕಾಮಗಾರಿಗಳ ಬಿಲ್‌ಗಳನ್ನು ಜೂನ್ 2022ರವರೆಗೆ ಇತ್ಯರ್ಥಗೊಳಿಸಲಾಗಿದೆ ಎಂದು ಮಂಡಳಿಯು ತಿಳಿಸಿತು. ಉಳಿದ 25 ಕಾಮಗಾರಿಗಳ ಬಿಲ್‌ಗಳನ್ನು ತಕ್ಷಣವೇ ಇತ್ಯಥಗೊಳಿಸಲಾಗುವುದು. ಶೇಕಡಾ 0ಯಿಂದ 25ರಷ್ಟು ಭಾಗಶಃ ವೆಚ್ಚದೊಂದಿಗೆ 114 ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿವೆ ಮತ್ತು ಅವುಗಳಲ್ಲಿ 101 ಕಾಮಗಾರಿಗಳ ಬಿಲ್‌ಗಳನ್ನು ಜುಲೈ 2022ಕ್ಕೆ

ಇತ್ಯರ್ಥಗೊಳಿಸಲಾಗಿದೆ ಹಾಗೂ ಉಳಿದ 13 ಕಾಮಗಾರಿಗಳ ಬಿಲ್‌ಗಳನ್ನು ತಕ್ಷಣವೇ ಇತ್ಯರ್ಥ ಗೊಳಿಸಲಾಗುವುದು ಎಂದೂ ಸಹ ಮಂಡಳಿಯು ತಿಳಿಸಿತು.

ಅನುಷ್ಠಾನ ಏಜೆನ್ಸಿಗಳಿಗೆ ಬಿಡುಗಡೆಯಾದ ನಿಧಿಗಳಲ್ಲಿ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯ ಸ್ಥಿತಿಯನ್ನು ಪತ್ತೆಹಚ್ಚಲು ಮಂಡಳಿಯಲ್ಲಿ ಯಾವುದೇ ಕಾರ್ಯವಿಧಾನವು ಅಸ್ತಿತ್ವದಲ್ಲಿಲ್ಲದ ಕಾರಣ ಉತ್ತರವನ್ನು ಒಪ್ಪಲಾಗುವುದಿಲ್ಲ. ಅಲ್ಲದೆ, ಬಿಲ್‌ಗಳ ಇತ್ಯರ್ಥದಲ್ಲಿ ಬಾಕಿ ಉಳಿದಿರುವುದು ಮತ್ತು ಪ್ರಗತಿ ವರದಿಗಳನ್ನು ಇಂದೀಕರಿಸದಿರುವುದರಿಂದ ಕಾಮಗಾರಿಗಳು ಪೂರ್ಣಗೊಂಡಿರುವುದು ಅನುಮಾನಾಸ್ಪದವಾಗಿದೆ.

ಕೆಳಗೆ ತಿಳಿಸಿರುವಂತೆ ಜಂಟಿ ಭೌತಿಕ ಪರಿಶೀಲನೆಯ ಸಮಯದಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದು ಅನುಮಾನಾಸ್ಪದವಾಗಿರುವ ನಿದರ್ಶನಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು:

**ನಿದರ್ಶನ**

***I. ಎರಡು ಶೌಚಾಲಯ ಬ್ಲಾಕ್‌ಗಳ ಕಾಮಗಾರಿಯನ್ನು ಕಾರ್ಯಗತಗೊಳಿಸದಿರುವುದು ಮತ್ತು ₹18 ಲಕ್ಷ ಅನುಮಾನಾಸ್ಪದ ವೆಚ್ಚ***

*ದೇವದುರ್ಗ ಪಟ್ಟಣದ ಕೇಂದ್ರೀಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಾಲ್ಕು ಹೈಟೆಕ್ ಶೌಚಾಲಯ ಬ್ಲಾಕ್‌ಗಳ (ತಲಾ ₹ ಒಂಭತ್ತು ಲಕ್ಷ) ನಿರ್ಮಾಣದ ಕಾಮಗಾರಿಯನ್ನು ಮಂಡಳಿಯು ಕೆಆರ್‌ಐಡಿಎಲ್ ರಾಯಚೂರಿಗೆ ವಹಿಸಿಕೊಟ್ಟಿತ್ತು ಮತ್ತು ಈ ಕಾಮಗಾರಿಗೆ ₹36 ಲಕ್ಷವನ್ನು ಒದಗಿಸಿತ್ತು ಎಂಬುದನ್ನು 2015–16ನೇ ಅವಧಿಯ ಕಾರ್ಯ ಯೋಜನೆಯಲ್ಲಿದ್ದ ಕಾಮಗಾರಿಗಳ ಲೆಕ್ಕಪರಿಶೋಧನಾ ವಿಶ್ಲೇಷಣೆಯು ತಿಳಿಯಪಡಿಸಿತು.*

*ನಾಲ್ಕು ಶೌಚಾಲಯ ಬ್ಲಾಕ್‌ಗಳಲ್ಲಿ ಎರಡು ಬ್ಲಾಕ್‌ಗಳನ್ನು ಮಾತ್ರ ನಿರ್ಮಿಸಲಾಗಿತ್ತು ಎಂಬುದನ್ನು ಹೊಸದಾಗಿ ನಿರ್ಮಿಸಲಾದ ಕಟ್ಟಡದ ಜಂಟಿ ಭೌತಿಕ ಪರಿಶೀಲನೆ ಮತ್ತು ಭೌತಿಕ ಪರಿಶೀಲನೆಯ ಸಮಯದಲ್ಲಿ ತೆಗೆದ ಫೋಟೋಗಳು ಮತ್ತು ವೀಡಿಯೊಗಳು ತಿಳಿಯಪಡಿಸಿದವು. ಇನ್ನೆರಡು ಬ್ಲಾಕ್‌ಗಳು ಅಸ್ತಿತ್ವದಲ್ಲಿರಲಿಲ್ಲ. ಹೀಗೆ ಉಳಿದ ಎರಡು ಬ್ಲಾಕ್‌ಗಳ ನಿರ್ಮಾಣವು ಅನುಮಾನಾಸ್ಪದವಾಗಿದ್ದು ₹18 ಲಕ್ಷ ವೆಚ್ಚ ಮಾಡಿರುವುದು ಸಹ ಅನುಮಾನಾಸ್ಪದವಾಗಿದೆ.*

***II. ಕಾಮಗಾರಿಗಳನ್ನು ಅಂಶಿಕವಾಗಿ ಕಾರ್ಯಗತಗೊಳಿಸಿರುವುದು***

*ಕಲಬುರಗಿಯ ಚಿತ್ತಾಪುರ ತಾಲೂಕಿನ ನಾಲವಾರ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 2018–19ನೇ ಸಾಲಿನ ವಾರ್ಷಿಕ ಕಾರ್ಯ ಯೋಜನೆಯಲ್ಲಿ ನವೀಕರಣ ಕಾಮಗಾರಿಗೆ ಮಂಡಳಿಯಿಂದ ₹30 ಲಕ್ಷ ಬಿಡುಗಡೆ ಮಾಡಲಾಯಿತು. ನವೀಕರಣ ಕಾಮಗಾರಿಗಳನ್ನು ಭಾಗಶಃ ಮಾತ್ರ ಕಾರ್ಯಗತ ಗೊಳಿಸಲಾಗಿತ್ತು ಎಂಬುದನ್ನು ಕಾಮಗಾರಿಗಳ ಜಂಟಿ ಭೌತಿಕ ಪರಿಶೀಲನೆಯ ಸಮಯದಲ್ಲಿ ಗಮನಿಸಲಾಯಿತು. ಟಾಯ್ಲೆಟ್‌ಗಳಿಗೆ ಗ್ರಾನೈಟ್ ನೆಲಹಾಸು, ಸಿದ್ಧತಾ ಕೊಠಡಿ ಮತ್ತು ಆಪರೇಷನ್ ಥಿಯೇಟರ್, ಒಂದು ಕೋಟ್ ವಾಲ್ ಪುಟ್ಟಿ, 90 ಎಂಎಂ ಮಳೆನೀರಿನ ಎಚ್‌ಡಿಪಿಇ ಪೈಪ್‌ಗಳನ್ನು ಒದಗಿಸುವುದು, ನಾಲ್ಕು ಆನೋಡೈಸ್ಡ್ ಅಲ್ಯೂಮಿನಿಯಂ ಬಾಗಿಲುಗಳನ್ನು ಒದಗಿಸುವುದು, ಬಾಗಿಕೊಳ್ಳಬಹುದಾದ ಉಕ್ಕಿನ ಶಟರ್‌ಗಳನ್ನು ಒದಗಿಸುವುದು ಮತ್ತು ಸರಿಪಡಿಸುವುದು, ಶಹಾಬಾದ್‌ನಲ್ಲಿ ಅಸ್ತಿತ್ವದಲ್ಲಿರುವ ಕಾಂಪೌಂಡ್ ಗೋಡೆಯ ನವೀಕರಣ ಕಾಮಗಾರಿಗಳು, ಸುಪರ್ ಸ್ಟ್ರಕ್ಚರ್‌ನಲ್ಲಿ ಕಲ್ಲುಮಣ್ಣು, ಬೋರ್‌ವೆಲ್ ಕೊರೆಯುವ ಕಾಮಗಾರಿ ಮತ್ತು ನೈರ್ಮಲ್ಯ ಕಾಮಗಾರಿಗಳು, ಮುಂತಾದವುಗಳನ್ನು ಕಾರ್ಯಗತಗೊಳಿಸಿರಲಿಲ್ಲ. ಕಟ್ಟಡವನ್ನು ಬಳಕೆ ಮಾಡುತ್ತಿರಲಿಲ್ಲ ಮತ್ತು ಪಕ್ಕದ ಕಟ್ಟಡದಲ್ಲಿ ಪಿಎಚ್‌ಸಿ ಕಾರ್ಯನಿರ್ವಹಿಸುತ್ತಿತ್ತು.*

**ಪ್ರದರ್ಶಿಕೆ–4.3: ಚಿತ್ತಾಪುರ ತಾಲ್ಲೂಕಿನ ನಲವಾರ ಪಿಹೆಚ್‌ಸಿಯಲ್ಲಿ ಅಪೂರ್ಣ ನವೀಕರಣ ಕಾಮಗಾರಿಗಳು**



### *4.2.7 ರದ್ದುಗೊಳಿಸಿದ ಕಾಮಗಾರಿಗಳು*

2014–15ರ ಅವಧಿಯ ಎಎಪಿಯಲ್ಲಿ ಕಲಬುರಗಿಯ ರಾಜೀವ್ ಗಾಂಧಿ ಥೀಮ್ ಪಾರ್ಕ್‌ನಲ್ಲಿ ನಾಲ್ಕು ವಿಭಿನ್ನ ಕಾಮಗಾರಿಗಳನ್ನು ಮತ್ತು ಕಲಬುರಗಿಯ ಕೊತ್ನೂರು ಡಿ ಪಾರ್ಕ್‌ನಲ್ಲಿ ಮತ್ತೊಂದು ಕಾಮಗಾರಿಯನ್ನು ಒಟ್ಟು ₹9.52 ಕೋಟಿ ಅಂದಾಜು ವೆಚ್ಚದಲ್ಲಿ ಕಾರ್ಯಗತಗೊಳಿಸಲು ಮಂಡಳಿಯು ಅನುಮೋದನೆ ನೀಡಿತು ಮತ್ತು ಅನುಷ್ಠಾನಕ್ಕಾಗಿ ನಿರ್ಮಿತಿ ಕೇಂದ್ರಕ್ಕೆ ₹5.67 ಕೋಟಿ ಮೊತ್ತವನ್ನು ಬಿಡುಗಡೆ ಮಾಡಿತು.

ಒಟ್ಟು ₹5.60 ಕೋಟಿ ವೆಚ್ಚದ ನಂತರ ಈ ಎಲ್ಲಾ ಕಾಮಗಾರಿಗಳನ್ನು (ಏಪ್ರಿಲ್ 2022) ರದ್ದುಗೊಳಿಸಲಾಗಿತ್ತು ಎಂಬುದನ್ನು ದಾಖಲೆಗಳ ಪರಿಶೀಲನೆಯಲ್ಲಿ ಲೆಕ್ಕಪರಿಶೋಧನೆಯು ಗಮನಿಸಿತು. ಮಂಡಳಿಯ ಸಿಬ್ಬಂದಿಯೊಂದಿಗೆ ಈ ಕಾಮಗಾರಿಗಳ ಜಂಟಿ ಭೌತಿಕ ಪರಿಶೀಲನೆಯ ಸಮಯದಲ್ಲಿ ಅಪೂರ್ಣ ಕಟ್ಟಡಗಳ ಸ್ಥಿತಿಯನ್ನು **ಕೋಷ್ಟಕ–4.5**ರಲ್ಲಿ ಮತ್ತು ತೆಗೆದ ಛಾಯಾಚಿತ್ರಗಳನ್ನು **ಪ್ರದರ್ಶಿಕೆ–4.4** ರಲ್ಲಿ ನೀಡಲಾಗಿದೆ.

**ಕೋಷ್ಟಕ–4.5: ಏಪ್ರಿಲ್ 2022ರಲ್ಲಿದ್ದಂತೆ ನಿರ್ಮಿತಿ ಕೇಂದ್ರಗಳು ರದ್ದುಗೊಳಿಸಿರುವ ಕಾಮಗಾರಿಗಳ ಸ್ಥಿತಿ**

| ಕಾಮಗಾರಿಗಳ ಹೆಸರು | ಅಂದಾಜು ವೆಚ್ಚ | ಭರಿಸಿದ ವೆಚ್ಚ | ಏಪ್ರಿಲ್ 2022ರಲ್ಲಿದ್ದಂತೆ ಸ್ಥಿತಿ |
|---|---|---|---|
| | (₹ ಕೋಟಿಗಳಲ್ಲಿ) | | |
| 7ಡಿ ಥಿಯೇಟರ್/ಫನ್ ಕಾಂಪ್ಲೆಕ್ಸ್ ನಿರ್ಮಾಣ | 6.95 | 3.15 | ಛಾವಣಿಯವರೆಗೆ ನಿರ್ಮಾಣವಾಗಿದೆ ಮತ್ತು 2017ರಲ್ಲಿ ರದ್ದುಗೊಳಿಸಲಾಗಿದೆ. ಕಿಡಿಗೇಡಿ ಚಟುವಟಿಕೆಗಳ ತಾಣವಾಗಿದೆ. |
| ಮಕ್ಕಳ ವಸತಿಯ ನಿರ್ಮಾಣ | | | ಛಾವಣಿಯವರೆಗೆ ನಿರ್ಮಾಣವಾಗಿದೆ ಮತ್ತು 2017ರಲ್ಲಿ ರದ್ದುಗೊಳಿಸಲಾಗಿದೆ. ಗೋಡೆಗಳು ಬಿರುಕುಗಳೊಂದಿಗೆ ಸಂಪೂರ್ಣ ಹಾಳಾಗಿವೆ. |
| ಕೀಟಗಳ ಮನೆಯ ನಿರ್ಮಾಣ | | | ಛಾವಣಿಯವರೆಗೆ ನಿರ್ಮಾಣವಾಗಿದೆ ಮತ್ತು 2017ರಲ್ಲಿ ರದ್ದುಗೊಳಿಸಲಾಗಿದೆ. |
| ಮತ್ಸ್ಯಾಗಾರದ ನಿರ್ಮಾಣ | | | ಲಿಂಟಲ್‌ವರೆಗೆ ನಿರ್ಮಾಣವಾಗಿದೆ ಮತ್ತು 2017ರಲ್ಲಿ ರದ್ದುಗೊಳಿಸಲಾಗಿದೆ. |
| ಕೊತ್ನೂರು ಉದ್ಯಾನವನದಲ್ಲಿ ಕನ್ಸರ್ಟ್ ಗ್ರೌಂಡ್ ಸ್ಟೇಜ್, ಗ್ರೀನ್ ರೂಂ ಇತ್ಯಾದಿಗಳ ನಿರ್ಮಾಣ | 2.57 | 2.45 | ನೆಲಹಾಸು ಮತ್ತು ಶೌಚಾಲಯಗಳು ಸಂಪೂರ್ಣ ಹಾಳಾಗಿವೆ. |
| **ಒಟ್ಟು** | **9.52** | **5.59** | |

ಆಧಾರ: ಕಲಬುರಗಿಯ ನಿರ್ಮಿತಿ ಕೇಂದ್ರವು ಒದಗಿಸಿದ ಮಾಹಿತಿ

ಕಟ್ಟಡಗಳ ನಿರ್ಮಾಣವನ್ನು ರದ್ದುಗೊಳಿಸಿದ್ದರಿಂದ ಮಂಡಳಿಯು ನಿರ್ಮಿತಿ ಕೇಂದ್ರಕ್ಕೆ ಮತ್ತಷ್ಟು ಹಣವನ್ನು ಬಿಡುಗಡೆ ಮಾಡಲಿಲ್ಲವಾಗಿ ಕಟ್ಟಡಗಳ ನಿರ್ಮಾಣದಲ್ಲಿ ಯಾವುದೇ ಪ್ರಗತಿ ಕಂಡುಬಂದಿಲ್ಲ. ಹೀಗೆ, ₹5.60 ಕೋಟಿ ವ್ಯರ್ಥ ವೆಚ್ಚವಾಯಿತು.

ಮಂಡಳಿಯು ಲೆಕ್ಕಪರಿಶೋಧನಾ ವೀಕ್ಷಣೆಯನ್ನು ಒಪ್ಪಿಕೊಂಡಿತು ಮತ್ತು ಸ್ವತ್ತುಗಳನ್ನು ಸೂಕ್ತವಾದ ಸಾರ್ವಜನಿಕ ಬಳಕೆಗೆ ಅನುವಾಗಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿತು (ಜುಲೈ 2022).

***ಪ್ರದರ್ಶಿಕೆ–4.4: ಕೆಲವು ರದ್ದುಗೊಳಿಸಿದ ಕಾಮಗಾರಿಗಳ ಸ್ಥಿತಿಯನ್ನು ತೋರಿಸುವ ಛಾಯಾಚಿತ್ರಗಳು***



ಮತ್ಸ್ಯಾಗಾರದ ಕಟ್ಟಡ



ಮಕ್ಕಳ ಮನೆ



ಹುಳುಮನೆ



7ಡಿ ಥಿಯೇಟರ್





ಆಧಾರ: ಜಂಟಿ ಭೌತಿಕ ಪರಿಶೀಲನೆಯ ಸಮಯದಲ್ಲಿ ತೆಗೆದ ಛಾಯಾಚಿತ್ರಗಳು

### *4.2.8 ಅಪೂರ್ಣ ಕಾಮಗಾರಿ*

ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಬಲ್ಲಟಗಿಯಿಂದ ಹಿರೇಬಿಡದಿನ್ನಿವರೆಗಿನ 5 ಕಿ.ಮೀ ಉದ್ದದ ರಸ್ತೆ ಸುಧಾರಣಾ ಕಾಮಗಾರಿಯನ್ನು ₹1.75 ಕೋಟಿ ಹಂಚಿಕೆ ಮೊತ್ತದಲ್ಲಿ 10 ಫೆಬ್ರವರಿ 2017ರಂದು ಮಾನ್ವಿಯ ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆಯ (ಪಿಆರ್‌ಇಡಿ) ಉಪ ವಿಭಾಗಕ್ಕೆ ವಹಿಸಲಾಯಿತು. ಜಂಟಿ ಭೌತಿಕ ಪರಿಶೀಲನೆಯ ಸಮಯದಲ್ಲಿ ತೆಗೆದ ಛಾಯಾಚಿತ್ರಗಳು ಮತ್ತು

ವೀಡಿಯೋಗಳು ರಸ್ತೆ ಕಾಮಗಾರಿಯನ್ನು ಮುರುಮ್ ಕಾಮಗಾರಿಯನ್ನು ಮಾತ್ರ ಮಾಡಲಾಗಿರುವುದನ್ನು ತೋರಿಸಿತು. ₹1.29 ಕೋಟಿ ವೆಚ್ಚ ಮಾಡಿದ ನಂತರ (ಜೂನ್ 2019) ಕಾಮಗಾರಿಯನ್ನು ಸ್ಥಗಿತಗೊಳಿಸಲಾಯಿತು. ಕೆಟಿಪಿಪಿ ಕಾಯಿದೆ 1999ರ ಪ್ರಕಾರ, ಜವಾಬ್ದಾರಿಯುತ ಸಿವಿಲ್ ಅಧಿಕಾರಿಯಿಂದ ಭೂಮಿಯನ್ನು ಹಸ್ತಾಂತರಿಸದ ಹೊರತು ಯಾವುದೇ ಕಾಮಗಾರಿಯನ್ನು ಪ್ರಾರಂಭಿಸಬಾರದು ಮತ್ತು ಕಾಮಗಾರಿಗೆ ಅಗತ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಮೊದಲು ಕಾಮಗಾರಿಗೆ ಟೆಂಡರ್ ಅನ್ನು ಸ್ವೀಕರಿಸಿದ್ದರೆ, ಕಾಮಗಾರಿ ಆದೇಶಗಳನ್ನು ನೀಡುವ ಮೊದಲು ಸಂಬಂಧಪಟ್ಟ ಅಧಿಕಾರಿಯಿಂದ ಭೂಸ್ವಾಧೀನಕ್ಕೆ ಎಷ್ಟು ಸಮಯ ಬೇಕು ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಆದರೆ, ಪಿಆರ್ಇಡಿ ಭೂಸ್ವಾಧೀನಕ್ಕೆ ಮುಂಚಿತವಾಗಿಯೇ ಕಾಮಗಾರಿಯನ್ನು ಪ್ರಾರಂಭಿಸಿತು ಮತ್ತು ಮುಂದುವರೆಸಲು ಸಾಧ್ಯವಾಗಲಿಲ್ಲ. ಹೀಗೆ, ಸಂಹಿತೆಯ ನಿಬಂಧನೆಗಳನ್ನು ಅನುಸರಿಸದಿರುವುದು ಫಲಪ್ರದವಲ್ಲದ ವೆಚ್ಚದಲ್ಲಿ ಪರಿಣಮಿಸಿತು.

**ಪ್ರದರ್ಶಿಕೆ–4.5: ಮಾನ್ವಿ ತಾಲ್ಲೂಕಿನ ಬಲ್ಲಟಗಿಯಿಂದ ಹಿರೇಬಿಡದಿನ್ನಿವರೆಗಿನ ರಸ್ತೆ ಸುಧಾರಣಾ ಕಾಮಗಾರಿಗಳು**





ಆಧಾರ: ಜಂಟಿ ಭೌತಿಕ ಪರಿಶೀಲನೆಯಲ್ಲಿ ತೆಗೆದ ಛಾಯಾಚಿತ್ರಗಳು

### *4.2.9 ಕಳಪೆ ಕಾಮಗಾರಿಗಳನ್ನು ಕಾರ್ಯಗತಗೊಳಿಸಿರುವುದು*

ಕಡಿಮೆ ಪ್ರಮಾಣದ ಸಂಚಾರ ದಟ್ಟಣೆ ಮತ್ತು ಶೇಕಡಾ 10ರಷ್ಟು ಸಿಬಿಆರ್ ಮೌಲ್ಯವನ್ನು ಹೊಂದಿರುವ ಸಿಮೆಂಟ್ ಕಾಂಕ್ರೀಟ್ ರಸ್ತೆಗಳಿಗೆ ಪಾದಚಾರಿ ನಿರ್ಮಾಣಕ್ಕಾಗಿ ಎಮ್30 ದರ್ಜೆಯ ಸಿಮೆಂಟ್ ಅನ್ನು ಬಳಸಲು ಐಆರ್‌ಸಿ 62:14 ಶಿಫಾರಸು ಮಾಡುತ್ತದೆ. ಅಲ್ಲದೆ, 15 ವರ್ಷಗಳ ಅವಧಿಗೆ ಸಿಮೆಂಟ್ ಕಾಂಕ್ರೀಟ್ ರಸ್ತೆಯನ್ನು ವಿನ್ಯಾಸಗೊಳಿಸಬೇಕೆಂದು ಐಆರ್‌ಸಿ 37:2018 ಷರತ್ತು ವಿಧಿಸುತ್ತದೆ. ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಆರ್‌ಎಚ್–05 ಕ್ಯಾಂಪ್‌ನಲ್ಲಿ ಅಂದಾಜು ₹ 1.02 ಕೋಟಿ ವೆಚ್ಚದಲ್ಲಿ ಸಿಮೆಂಟ್ ಕಾಂಕ್ರೀಟ್ (ಸಿಸಿ) ರಸ್ತೆ ನಿರ್ಮಾಣ ಕಾಮಗಾರಿಯನ್ನು ಕೆಆರ್‌ಐಡಿಎಲ್ ರಾಯಚೂರಿಗೆ 2015–16ನೇ ಸಾಲಿನ ಕಾರ್ಯ ಯೋಜನೆಯಡಿ ವಹಿಸಿ ₹0.82 ಕೋಟಿ ಮುಂಗಡ ಪಾವತಿ ಮಾಡಿತು. ಮಂಡಳಿಯು ಆಡಳಿತಾತ್ಮಕ ಅನುಮೋದನೆಯನ್ನು ನೀಡುವಾಗ (ಅಕ್ಟೋಬರ್ 2016) ನಿರ್ಮಾಣದಲ್ಲಿ ಎಮ್20 ಕಾಂಕ್ರೀಟ್ ಅನ್ನು ಬಳಸಲು ಶಿಫಾರಸು ಮಾಡಿತು. ಡಿಸೆಂಬರ್ 2019ರಲ್ಲಿ ಕಾಮಗಾರಿ ಪೂರ್ಣಗೊಂಡಿದೆ.

ಗ್ರಾಮೀಣ ರಸ್ತೆ ಕಾಮಗಾರಿಗಳ ಐಆರ್‌ಸಿ ವಿಶಿಷ್ಟತೆಗಳ ಪ್ರಕಾರ, ಶೇಕಡಾ 10 ಸಿಬಿಆರ್ ಮೌಲ್ಯದ ಮಣ್ಣಿನಲ್ಲಿ ಎಮ್30 ಕಾಂಕ್ರೀಟ್‌ಅನ್ನು ಶಿಫಾರಸು ಮಾಡಲಾಗಿದೆ. ಐಆರ್‌ಸಿ ವಿಶಿಷ್ಟತೆಗಳ ಪ್ರಕಾರ, ಪಾದಚಾರಿ ಮಾರ್ಗಕ್ಕೆ ಸಾಕಷ್ಟು ಬದಿಯ ಬೆಂಬಲವನ್ನು ನೀಡಲು ಮತ್ತು ಸಾಗಾಣಿಕೆ ಮಾರ್ಗದಿಂದ ರಸ್ತೆ ಬದಿಯ ಚರಂಡಿಗೆ ಮೇಲ್ಮೈ ನೀರನ್ನು ಹರಿಸಲು ರಸ್ತೆಯ ಭುಜವನ್ನು ನಿರ್ಮಿಸಬೇಕು. ಆದರೆ, ಮಂಡಳಿಯು ಎಮ್20 ಸಿಮೆಂಟ್ ಕಾಂಕ್ರೀಟ್‌ನಿಂದ ರಸ್ತೆ ಕಾಮಗಾರಿ ನಡೆಸಿರುವುದನ್ನು ಗಮನಿಸಲಾಯಿತು. ಭುಜಗಳ ನಿರ್ಮಾಣವನ್ನು ಅಂದಾಜಿನಲ್ಲಿ ಸೇರಿಸಿಲ್ಲದಿರುವುದನ್ನು ಗಮನಿಸಲಾಯಿತು ಮತ್ತು ಯಾವುದೇ ಭುಜಗಳನ್ನು ನಿರ್ಮಿಸಿರಲಿಲ್ಲ. ಸಂಪೂರ್ಣ ರಸ್ತೆಯು ಬಿರುಕು ಬಿಟ್ಟಿರುವುದನ್ನು ಜಂಟಿ ಭೌತಿಕ ಪರಿಶೀಲನೆಯು ತೋರಿಸಿತು. ಅಲ್ಲದೆ, ಮಣ್ಣಿನ ಭುಜಗಳನ್ನು ನಿರ್ಮಿಸದ ಕಾರಣ, ಒಂದು ಸ್ಥಳದಲ್ಲಿ

ರಸ್ತೆಯ ಒಂದು ಬದಿಯು ಸಂಪೂರ್ಣವಾಗಿ ಪಕ್ಕಕ್ಕೆ ಬಾಗಿತ್ತು. ಹೀಗೆ, ₹0.82 ಕೋಟಿ ವೆಚ್ಚದಲ್ಲಿ ನಿರ್ವಹಿಸಿರುವ ರಸ್ತೆ ಕಾಮಗಾರಿಯಲ್ಲಿ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಲೆಕ್ಕಪರಿಶೋಧನೆಗೆ ಸಾಧ್ಯವಾಗಲಿಲ್ಲ.

**ಪ್ರದರ್ಶಿಕೆ–4.6: ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಆರ್‌ಹೆಚ್ ಕ್ಯಾಂಪ್‌ನಲ್ಲಿ ರಸ್ತೆಯ ಸ್ಥಿತಿ**





ಆಧಾರ: ಜಂಟಿ ಭೌತಿಕ ಪರಿಶೀಲನೆಯಲ್ಲಿ ತೆಗೆದ ಛಾಯಾಚಿತ್ರಗಳು

### *4.2.10 ಸಮನ್ವಯದ ಕೊರತೆಯಿಂದ ವ್ಯರ್ಥ ವೆಚ್ಚ*

2019–20ರ ಅವಧಿಗೆ ₹1.01 ಕೋಟಿ ಅಂದಾಜು ವೆಚ್ಚದಲ್ಲಿ 600 ಮೀಟರ್ ಉದ್ದದ ಒಳಚರಂಡಿ ಮತ್ತು ಕಪ್ಪು ಮೇಲ್ಭಾಗದ ರಸ್ತೆಯೊಂದಿಗೆ ಸಿಮೆಂಟ್ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿಗೆ ಮಂಡಳಿಯ ಎಎಪಿಯಲ್ಲಿ ಅನುಮೋದನೆ ನೀಡಲಾಯಿತು. ಇಇ, ಪಿಡಬ್ಲ್ಯುಡಿ, ಬಳ್ಳಾರಿ ಅವರು ಗುತ್ತಿಗೆದಾರರೊಬ್ಬರಿಗೆ ₹1.23 ಕೋಟಿ ವೆಚ್ಚದಲ್ಲಿ ನಾಲ್ಕು ತಿಂಗಳೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಬೇಕೆಂಬ ಷರತ್ತಿನೊಂದಿಗೆ ಕಾಮಗಾರಿಯನ್ನು ವಹಿಸಿದರು (ಮಾರ್ಚ್ 2020). ಗುತ್ತಿಗೆದಾರರು ₹0.99 ಕೋಟಿ ವೆಚ್ಚದಲ್ಲಿ 2021ರ ಮೇ ತಿಂಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಿ ಬಳ್ಳಾರಿಯ ಪಿಡಬ್ಲ್ಯುಡಿಗೆ ಹಸ್ತಾಂತರಿಸಿದರು.

ಕಾಮಗಾರಿಗಳ ಜಂಟಿ ಭೌತಿಕ ತಪಾಸಣೆಯ (ಜನವರಿ 2022) ಸಮಯದಲ್ಲಿ, ಸಂಪೂರ್ಣ ಕಾಂಕ್ರೀಟ್ ರಸ್ತೆ ಮತ್ತು ಕಪ್ಪು ಮೇಲ್ಭಾಗದ ರಸ್ತೆಯ ಒಂದು ಭಾಗವನ್ನು ಭೂಗತ ಒಳಚರಂಡಿ (ಯುಜಿಡಿ) ಪೈಪ್‌ಗಳನ್ನು ಹಾಕಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು (ಕೆಯುಡಬ್ಲ್ಯುಎಸ್&ಡಿಬಿ) ಸಂಪೂರ್ಣವಾಗಿ ಹಾನಿ ಮಾಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಯುಜಿಡಿ ಕಾಮಗಾರಿಯನ್ನು ಕಾರ್ಯಗತಗೊಳಿಸುವ ಮೊದಲು ಕೆಯುಡಬ್ಲ್ಯುಎಸ್&ಡಿಬಿ ಬಳ್ಳಾರಿ ಪಿಡಬ್ಲ್ಯುಡಿಯ ಇಇರವರಿಂದ ಅನುಮತಿಯನ್ನು ಪಡೆದಿರಲಿಲ್ಲ ಅಥವಾ ರಸ್ತೆಯನ್ನು ಮೂಲ ಸ್ಥಿತಿಗೆ ತರಲು ಹಾನಿಯನ್ನು ಸರಿಪಡಿಸಿರಲಿಲ್ಲ.

ಹೀಗೆ, ಈ ಪ್ರದೇಶದಲ್ಲಿನ ಕಾಮಗಾರಿಗಳನ್ನು ನಿರ್ವಹಿಸುವಲ್ಲಿ ಅಧಿಕಾರಿಗಳ ನಡುವಿನ ಸಮನ್ವಯತೆ ಕೊರತೆಯು ₹0.99 ಕೋಟಿ ವ್ಯರ್ಥ ವೆಚ್ಚದಲ್ಲಿ ಪರಿಣಮಿಸಿತು.

ಯುಜಿಡಿ ಕೆಲಸ ಮುಗಿದ ನಂತರ ಹಾನಿಗೊಳಗಾದ ಭಾಗವನ್ನು ಪುನಃಸ್ಥಾಪಿಸಲು ಕೆಯುಡಬ್ಲ್ಯುಎಸ್&ಡಿಬಿ ಉಪ ವಿಭಾಗವು ಒಪ್ಪಿಕೊಂಡಿದೆ ಎಂದು ಮಂಡಳಿಯು ತಿಳಿಸಿತು (ಜುಲೈ 2022).

### *4.2.11 ಸುವರ್ಣ ಕರ್ನಾಟಕ ಭವನವನ್ನು ಬಳಸದಿರುವುದು*

ಕರ್ನಾಟಕ ಸಾರ್ವಜನಿಕ ಖರೀದಿಯಲ್ಲಿ ಪಾರದರ್ಶಕತೆ ಕಾಯಿದೆಯ ಸೆಕ್ಷನ್ 4(ಜಿ) ಅಡಿಯಲ್ಲಿ ವಿನಾಯಿತಿಗಳನ್ನು ನೀಡುವ ಮೂಲಕ ಟೆಂಡರ್ ಮಾಡದೆಯೇ ಕೆಆರ್‌ಐಡಿಎಲ್‌ಗೆ ಕಾಮಗಾರಿಗಳನ್ನು ವಹಿಸಿಕೊಡಲಾಗುತ್ತದೆ. ₹ ಎರಡು ಕೋಟಿವರೆಗಿನ ಕಾಮಗಾರಿಗಳಿಗೆ ಮಾತ್ರ ವಿನಾಯಿತಿಯ ಲಭ್ಯವಿದ್ದಿತು.

ಕೆಆರ್‌ಐಡಿಎಲ್‌ನ ವಿನಾಯಿತಿಯು, ಕೆಆರ್‌ಐಡಿಎಲ್‌ಗೆ ಕಾಮಗಾರಿಗಳನ್ನು ವಹಿಸಿಕೊಡುವ ಇಲಾಖೆಗಳು ಕಾಮಗಾರಿಗಳನ್ನು ವಿಭಜಿಸಬಾರದು ಎಂಬ ಷರತ್ತುಗಳಿಗೆ ಒಳಪಟ್ಟಿತ್ತು.

ಸೇಡಂ ತಾಲ್ಲೂಕಿನಲ್ಲಿ ಸುವರ್ಣ ಕರ್ನಾಟಕ ಭವನ ನಿರ್ಮಾಣಕ್ಕೆ 2014–15ರ ಅವಧಿಯ ವಾರ್ಷಿಕ ಕಾರ್ಯ ಯೋಜನೆಯಡಿ ಕೆಆರ್‌ಐಡಿಎಲ್‌ಗೆ ಪ್ಯಾಕೇಜ್ 1ರಡಿ ₹1.47 ಕೋಟಿ ಅನುದಾನವನ್ನು ಮಂಡಳಿ ಒದಗಿಸಿತ್ತು. ಇದೇ ಕಾಮಗಾರಿಯನ್ನು ಪೂರ್ಣಗೊಳಿಸಲು ಮಂಡಳಿಯು ಇದೇ ಕಾರ್ಯ ಯೋಜನೆಯಡಿ ₹1.33 ಕೋಟಿ ಹೆಚ್ಚುವರಿ ಹಣವನ್ನೂ ಮಂಜೂರು ಮಾಡಿತ್ತು. ಹೀಗೆ, 2014–15ರ ಅವಧಿಯ ಕಾರ್ಯ ಯೋಜನೆಯಲ್ಲಿಯೇ ಕಾಮಗಾರಿಗೆ ಹಂಚಿಕೆಯನ್ನು ಎರಡು ಭಾಗಗಳಾಗಿ ವಿಭಜಿಸಲಾಗಿತ್ತು. ಕಾಮಗಾರಿಗಳನ್ನು ಎರಡು ಪ್ಯಾಕೇಜ್‌ಗಳಲ್ಲಿ ವಿಭಜಿಸಿ ಕೆಆರ್‌ಐಡಿಎಲ್‌ಗೆ ವಹಿಸಿರುವುದು ಸರ್ಕಾರದ ನಿರ್ದೇಶನಗಳನ್ನು ಉಲ್ಲಂಘಿಸಿದಂತಾಯಿತು.

ಸುವರ್ಣ ಕರ್ನಾಟಕ ಭವನ ಕಟ್ಟಡವನ್ನು ಮಾರ್ಚ್ 2019ರಲ್ಲಿ ಪೂರ್ಣಗೊಳಿಸಿ ಸೇಡಂ ಪುರಸಭೆಗೆ ಹಸ್ತಾಂತರಿಸಲಾಯಿತು. ಕಟ್ಟಡವು ಪೂರ್ಣಗೊಂಡ ನಂತರ ಎರಡು ಸಂದರ್ಭಗಳನ್ನು ಹೊರತುಪಡಿಸಿ, ಬಳಕೆಯಾಗದಿರುವುದನ್ನು ಗಮನಿಸಲಾಯಿತು. ಹೀಗೆ, ₹2.80 ಕೋಟಿ ವೆಚ್ಚವು ಫಲಪ್ರದವಾಗಲಿಲ್ಲ.

ಅನುಷ್ಠಾನ ಏಜೆನ್ಸಿಯು ಕಾಮಗಾರಿಗಳನ್ನು ಪೂರ್ಣಗೊಳಿಸಿ ಬಳಕೆದಾರರ ಇಲಾಖೆಗೆ (ಸೇಡಂ ಪುರಸಭೆ) ಹಸ್ತಾಂತರಿದೆ ಎಂದು ಸರ್ಕಾರವು ಉತ್ತರಿಸಿತು (ಜುಲೈ 2022). ಹಸ್ತಾಂತರ ಪ್ರಕ್ರಿಯೆ ಪೂರ್ಣಗೊಂಡ ನಂತರ, ಅದರ ಬಳಕೆಯು ಬಳಕೆದಾರ ಇಲಾಖೆಯ ಜವಾಬ್ದಾರಿಯಾಗಿರುತ್ತದೆ ಎಂದೂ ಸಹ ತಿಳಿಸಲಾಯಿತು. ಆದರೂ, ಈ ಪ್ರದೇಶದ ಸಾಮಾಜಿಕ–ಆರ್ಥಿಕ ಅಭಿವೃದ್ಧಿಯನ್ನು ವೇಗಗೊಳಿಸಲು ಮಂಡಳಿಯ ಹಣವನ್ನು ವೆಚ್ಚ ಮಾಡಬೇಕು ಮತ್ತು ರಚಿಸಲಾದ ಸ್ವತ್ತುಗಳ ಬಳಕೆಯ ಮೂಲಕ ಮಾತ್ರ ಉದ್ದೇಶವನ್ನು ಸಾಧಿಸಲಾಗುತ್ತದೆ ಎಂಬ ಅಂಶವನ್ನು ಮಂಡಳಿಯು ಪರಿಗಣಿಸಿರಲಿಲ್ಲ.

### *4.2.12 ಚಿಂಚೋಳಿ ಪಟ್ಟಣದಲ್ಲಿ ಶಾಪಿಂಗ್ ಸಂಕೀರ್ಣವನ್ನು ಬಳಸದಿರುವುದು*

2015–16ರ ಕಾರ್ಯ ಯೋಜನೆಯಡಿ ಕಲಬುರಗಿ ಜಿಲ್ಲೆಯ ಚಿಂಚೋಳಿ ಪಟ್ಟಣದಲ್ಲಿ ಮಂಡಳಿಯು ಶಾಪಿಂಗ್ ಸಂಕೀರ್ಣವನ್ನು ನಿರ್ಮಿಸಿತು. ಶಾಪಿಂಗ್ ಸಂಕೀರ್ಣದ ನಿರ್ಮಾಣದ ಮೇಲೆ ₹1.97 ಕೋಟಿ ವೆಚ್ಚ ಮಾಡಲಾಗಿತ್ತು. ಎಲೆಕ್ಟ್ರಿಕಲ್ ಮತ್ತು ಇತರೆ ಕಾಮಗಾರಿಗಳು ಅಪೂರ್ಣಗೊಂಡಿದ್ದರಿಂದ ಸಂಕೀರ್ಣವು ಬಳಕೆಯಾಗದೆ ಉಳಿದಿತ್ತು.

**ಪ್ರದರ್ಶಿಕೆ–4.7: ಚಿಂಚೋಳಿ ಪಟ್ಟಣದಲ್ಲಿನ ಶಾಪಿಂಗ್ ಸಂಕೀರ್ಣ**



ಆಧಾರ: ಜಂಟಿ ಭೌತಿಕ ಪರಿಶೀಲನೆಯ ಸಮಯದಲ್ಲಿ ತೆಗೆದ ಛಾಯಾಚಿತ್ರಗಳು

ಚಿಂಚೋಳಿ ಪಟ್ಟಣದ ಶಾಪಿಂಗ್ ಸಂಕೀರ್ಣ ಶೇಕಡಾ 80ರಷ್ಟು ಪೂರ್ಣಗೊಂಡಿದ್ದು ಎಲೆಕ್ಟ್ರಿಕಲ್ ಮತ್ತು ಇತರೆ ಕಾಮಗಾರಿಗಳನ್ನು ಒಳಗೊಂಡ ಉಳಿದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು ಹಾಗೂ ನಂತರ ಕಟ್ಟಡವನ್ನು ಬಳಕೆದಾರ ಇಲಾಖೆಗೆ ಹಸ್ತಾಂತರಿಸಲಾಗುವುದು ಎಂದು ಸರ್ಕಾರವು ತಿಳಿಸಿತು.

ಐದು ವರ್ಷಗಳಿಂದ ಕಾಮಗಾರಿ ಸ್ಥಗಿತಗೊಂಡಿದ್ದು, ಕಟ್ಟಡವನ್ನು ಪೂರ್ಣಗೊಳಿಸಲು ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಂಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಲ್ಲದೆ, ಬಳಕೆಯಾಗದ ಕಟ್ಟಡದ ಶಿಥಿಲಾವಸ್ಥೆಯ ದೃಷ್ಟಿಯಿಂದ ಮಂಡಳಿಯು ಹೆಚ್ಚುವರಿ ಹಣವನ್ನು ಹೂಡಿಕೆ ಮಾಡಬೇಕಾದ ಅವಶ್ಯಕತೆಯಿದೆ.

### *4.2.13 ಯಾದಗಿರಿಯಲ್ಲಿ ಜವಳಿ ತರಬೇತಿ ಕೇಂದ್ರ ನಿರ್ಮಾಣದ ಮೇಲೆ ಅನುತ್ಪಾದಕ ವೆಚ್ಚ*

ಯಾದಗಿರಿ ತಾಲೂಕಿನ ಬಂಡಳ್ಳಿ ಗ್ರಾಮದ ಹತ್ತಿಕುನ್ನಿ ಪ್ರದೇಶದಲ್ಲಿ ಹೈಟೆಕ್ ಜವಳಿ ತರಬೇತಿ ಕೇಂದ್ರ ನಿರ್ಮಾಣಕ್ಕೆ 2015–16ರ ಅವಧಿಯ ಕಾರ್ಯಯೋಜನೆಯಡಿ ಮಂಡಳಿಯು ₹5.02 ಕೋಟಿ ಅನುದಾನ ಮಂಜೂರು ಮಾಡಿತು. ಜವಳಿ ಕೈಗಾರಿಕೆಗಳಿಗೆ ನುರಿತ ಮಾನವಶಕ್ತಿಯನ್ನು ಸೃಷ್ಟಿಸುವುದು ಮತ್ತು ಜವಳಿ ಘಟಕಗಳನ್ನು ನಿರ್ವಹಿಸಲು ಉದ್ಯಮಶೀಲತಾ ಕೌಶಲ್ಯಗಳನ್ನು ಒದಗಿಸುವುದು ಮತ್ತು ಉದ್ಯೋಗವನ್ನು ಹೆಚ್ಚಿಸುವುದು ತರಬೇತಿ ಕೇಂದ್ರದ ಉದ್ದೇಶವಾಗಿತ್ತು. ಜವಳಿ ತರಬೇತಿ ಕೇಂದ್ರ ಯೋಜನೆಯ ಕರಡು ಯೋಜನಾ ವರದಿಯ ಪ್ರಕಾರ, ಕಡಚೂರು ಕೈಗಾರಿಕಾ ಪ್ರದೇಶದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು ಅಭಿವೃದ್ಧಿಪಡಿಸಿದ ಪ್ರಸ್ತಾವಿತ ಅಂತರರಾಷ್ಟ್ರೀಯ ಗುಣಮಟ್ಟದ ಜವಳಿ ಪಾರ್ಕ್ ಅನ್ನು ಪರಿಗಣಿಸಿ ಆ ಸ್ಥಳವನ್ನು ಆಯ್ಕೆ ಮಾಡಲಾಗಿತ್ತು ಹಾಗೂ ಅದಕ್ಕಾಗಿ ರಸ್ತೆ ರಚನೆಗೆ ಕೆಕೆಆರ್‌ಡಿಬಿ ₹10 ಕೋಟಿ ಅನುದಾನ ನೀಡಿತ್ತು. ಉದ್ದೇಶಿತ ಜವಳಿ ಪಾರ್ಕ್ ಹೂಡಿಕೆದಾರರ ಆಸಕ್ತಿಯನ್ನು ನಿರೀಕ್ಷಿಸಿ ಇನ್ನೂ ಕಾರ್ಯಾರಂಭ ಮಾಡಬೇಕಿದೆ. ಹೈಟೆಕ್ ತರಬೇತಿ ಕೇಂದ್ರವು ಆಡಳಿತಾತ್ಮಕ ಬ್ಲಾಕ್‌ಗಳು, ತರಬೇತಿ ಸೌಲಭ್ಯಗಳು, ಬಾಲಕರ ಮತ್ತು ಬಾಲಕಿಯರ ಹಾಸ್ಟೆಲ್ ಇತ್ಯಾದಿಗಳನ್ನು ಒಳಗೊಂಡಿತ್ತು. 2018–19ರ ಅವಧಿಯಲ್ಲಿ ಕಟ್ಟಡವನ್ನು ಪೂರ್ಣಗೊಳಿಸಲಾಯಿತು. ತರಬೇತಿ ಕೇಂದ್ರವನ್ನು ಇನ್ನೂ ಆರಂಭಿಸದ ಕಾರಣ ಕಟ್ಟಡವು ಬಳಕೆಯಾಗದೇ ಉಳಿದಿತ್ತು. ಹೀಗೆ, ಜವಳಿ ಮೂಲಸೌಕರ್ಯದಲ್ಲಿ ಮಂಡಳಿಯು ಮಾಡಿದ ₹5.02 ಕೋಟಿ ಹೂಡಿಕೆ ಇನ್ನೂ ಫಲಪ್ರದವಾಗಿರಲಿಲ್ಲ.

**ಪ್ರದರ್ಶಿಕೆ–4.8: ಯಾದಗಿರಿಯಲ್ಲಿನ ಜವಳಿ ತರಬೇತಿ ಕೇಂದ್ರ**




ಆಧಾರ: ಜಂಟಿ ಭೌತಿಕ ಪರಿಶೀಲನೆಯ ಸಮಯದಲ್ಲಿ ತೆಗೆದ ಛಾಯಾಚಿತ್ರಗಳು

ಈ ಕಾಮಗಾರಿಯನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗೆ ವಹಿಸಲಾಗಿದೆ ಮತ್ತು ಕಟ್ಟಡದ ಬಳಕೆಯನ್ನು ಮುಂದುವರಿಸಲಾಗುವುದು ಎಂದು ಸರ್ಕಾರವು ಉತ್ತರಿಸಿತು (ಜುಲೈ 2022).

### *4.2.14 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಉಪಕರಣಗಳ ಖರೀದಿಯ ಮೇಲೆ ಫಲಪ್ರದವಲ್ಲದ ವೆಚ್ಚ*

ಜಂಟಿ ಪರಿಶೀಲನೆಯ ಸಮಯದಲ್ಲಿ, ಕಲಬುರಗಿಯ ಆರೋಗ್ಯ ಕೇಂದ್ರಗಳಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಕಲಬುರಗಿ ಅವರು ಖರೀದಿಸಿದ ಉಪಕರಣಗಳು, ಕೆಳಗಿನ **ಪ್ರದರ್ಶಿಕೆ–4.9** ರಲ್ಲಿ ತೋರಿಸಿರುವಂತೆ, ಪಿಎಚ್‌ಸಿಯಲ್ಲಿ ನಿಷ್ಕ್ರಿಯವಾಗಿ ಉಳಿದಿರುವುದು ಕಂಡುಬಂದಿತು:

**ಪ್ರದರ್ಶಿಕೆ–4.9: ಪಿಹೆಚ್‌ಸಿ ಮತ್ತು ಸಿಹೆಚ್‌ಸಿಗಳಲ್ಲಿ ಉಪಕರಣಗಳು ಬಳಕೆಯಿಲ್ಲದೇ ಉಳಿದಿರುವುದು**





ಆಧಾರ: ಜಂಟಿ ಭೌತಿಕ ಪರಿಶೀಲನೆಯ ಸಮಯದಲ್ಲಿ ತೆಗೆದ ಛಾಯಾಚಿತ್ರಗಳು

### *4.2.15 ನೀರು ಸರಬರಾಜು ಕಾಮಗಾರಿಗಳ ಮೇಲೆ ವ್ಯರ್ಥ ವೆಚ್ಚ*

➢ ***₹25 ಲಕ್ಷ ವ್ಯರ್ಥ ವೆಚ್ಚ***

ವಿಶೇಷ ಘಟಕ ಯೋಜನೆ ಹಂಚಿಕೆಯಡಿಯಲ್ಲಿ ಯಾದಗಿರಿ ತಾಲೂಕಿನ ಕರ್ಣಗಿ ಗ್ರಾಮದಲ್ಲಿ ₹25 ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ಓವರ್‌ಹೆಡ್ ಟ್ಯಾಂಕ್ ಬಳಕೆಯಾಗದ ಪ್ರಕರಣವು ಲೆಕ್ಕಪರಿಶೋಧನೆಯ ಗಮನಕ್ಕೆ ಬಂದಿತು. ಬಳಕೆಯಾಗದ ಟ್ಯಾಂಕ್‌ನ ಛಾಯಾಚಿತ್ರವನ್ನು **ಪ್ರದರ್ಶಿಕೆ–4.10**ರಲ್ಲಿ ತೋರಿಸಲಾಗಿದೆ.

**ಪ್ರದರ್ಶಿಕೆ–4.10: ಯಾದಗಿರಿ ತಾಲ್ಲೂಕಿನ ಕರ್ಣಗಿ ಗ್ರಾಮದಲ್ಲಿ ಓವರ್‌ಹೆಡ್ ಟ್ಯಾಂಕ್‌ನ ಬಳಕೆ ಮಾಡದಿರುವುದು**



➢ ***₹50 ಲಕ್ಷ ಫಲಪ್ರದವಲ್ಲದ ವೆಚ್ಚ***

ರಾಯಚೂರು ನಗರದ ವಾರ್ಡ್ ನಂ.35ರಲ್ಲಿರುವ ಸಿದ್ದನಬಾವಿ ಕ್ಯಾಂಪ್ ಮೂಲಕ ರಾಂಪುರ ವಾಟರ್ ವರ್ಕ್ಸ್ ಫಿಲ್ಟರ್‌ಹೌಸ್ ನಿಂದ ಶ್ರೀರಾಮನಗರ ಕ್ಯಾಂಪ್‌ವರೆಗೆ ಶ್ರೀ ರಾಮ್ ನಗರ ಕ್ಯಾಂಪ್ ಮತ್ತು ಸಿದ್ದನ ರವಿ

ಕ್ಯಾಂಪ್ ವಸತಿಗಳಿಗೆ ಕುಡಿಯುವ ನೀರು ಪೂರೈಕೆಗಾಗಿ 150 ಎಮ್‌ಎಮ್ ಡಿಐ ಪೈಪ್‌ಲೈನನ್ನು ಅಳವಡಿಸಲು ಮಂಡಳಿಯು ರಾಯಚೂರು ನಗರಸಭೆಗೆ ₹50 ಲಕ್ಷ ಮೊತ್ತವನ್ನು ಮಂಜೂರು ಮಾಡಿತು.

ಪೈಪ್‌ಲೈನ್ ಕಾಮಗಾರಿ ಪೂರ್ಣಗೊಳ್ಳದ ಕಾರಣ ಹಾಗೂ ಪಂಪ್‌ಸೆಟ್, ಸ್ವಿಚ್ ಯೂನಿಟ್, ಎಲೆಕ್ಟ್ರಿಕಲ್ ಕಾಮಗಾರಿ ಮುಂತಾದ ಕಾಮಗಾರಿಗಳನ್ನು ಕೈಗೊಳ್ಳದಿದ್ದುದು ಒಂದು ವರ್ಷಕ್ಕೂ ಹೆಚ್ಚು ಕಾಲ ₹50 ಲಕ್ಷ ವೆಚ್ಚವು ಫಲಪ್ರದವಾಗದಿರುವಲ್ಲಿ ಪರಿಣಮಿಸಿತು.

**ಪ್ರದರ್ಶಿಕೆ–4.11: ಅಪೂರ್ಣ ಪೈಪ್‌ಲೈನ್ ಕಾಮಗಾರಿ**



### *4.2.16 ದಪ್ಪವಾದ ಬಿಟುಮಿನಸ್ ಮಕಾಡಮ್‌ನ ಅಕ್ರಮ ಅವಕಾಶ*

ರಸ್ತೆಗಳನ್ನು ಬಲಪಡಿಸುವ ಕಾಮಗಾರಿಯನ್ನು ಕೈಗೊಳ್ಳುವಾಗ ರಸ್ತೆ ವಸ್ತುಗಳ ಸಂಯೋಜನೆಯನ್ನು ನಿರ್ಧರಿಸಲು ಸಹಾಯ ಮಾಡುವ ಸಂಚಾರ ಸಾಂದ್ರತೆಯ ಸಮೀಕ್ಷೆಯು ಪ್ರಮುಖವಾಗಿದೆ. ದಪ್ಪವಾದ ಬಿಟುಮಿನಸ್ ಮಕಾಡಮ್ (ಡಿಬಿಎಮ್) ಒಂದು ಬೈಂಡರ್ ಕೋರ್ಸ್ ಆಗಿದ್ದು, ಇದು 5 ಮಿಲಿಯನ್ ಸ್ಟ್ಯಾಂಡರ್ಡ್ ಆಕ್ಸಲ್ (ಎಮ್‌ಎಸ್‌ಎ) ಲೋಡ್ ವಾಹನಗಳನ್ನು ಸಾಗಿಸಲು ವಿನ್ಯಾಸಗೊಳಿಸಲಾದ ರಸ್ತೆಗಳಿಗೆ ಶಿಫಾರಸು ಮಾಡಲ್ಪಟ್ಟಿದೆ. ಆದ್ದರಿಂದ, ಅಂದಾಜುಗಳನ್ನು ತಯಾರಿಸುವ ಮೊದಲು ಸೂಕ್ತವಾದ ಸಂಚಾರ ಸಾಂದ್ರತೆಯ ಸಮೀಕ್ಷೆಯ ಅಗತ್ಯವಿರುತ್ತದೆ.

- ಕಲಬುರಗಿ ಮಹಾನಗರ ಪಾಲಿಕೆಯು (2016–17) ಕಲಬುರಗಿ ನಗರದಲ್ಲಿ ಅನುಕ್ರಮವಾಗಿ ₹9.62 ಕೋಟಿ ಮತ್ತು ₹ 5.35 ಕೋಟಿ ವೆಚ್ಚದಲ್ಲಿ ಎರಡು[17] ರಸ್ತೆ ಕಾಮಗಾರಿಗಳನ್ನು ಕಾರ್ಯಗತಗೊಳಿಸಿತ್ತು. ಎರಡೂ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅಗತ್ಯ ಸಂಚಾರ ದಟ್ಟಣೆ ಸಮೀಕ್ಷೆ ನಡೆಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಚೀಫ್ ಇಂಜಿನಿಯರ್ (ಸಿಇ), ಕಟ್ಟಡಗಳು ಮತ್ತು ಸಂಪರ್ಕ, ಧಾರವಾಡ ಇವರು ಅಂದಾಜಿನ ತಾಂತ್ರಿಕ ಪರಿಶೀಲನೆಯ ಸಮಯದಲ್ಲಿ (ನವೆಂಬರ್ 2014) ಈ ರಸ್ತೆ ಕಾಮಗಾರಿಗಳಿಗೆ ಡಿಬಿಎಂ ಹಾಕುವ ಬದಲು 50 ಎಂಎಂ ಬಿಟುಮಿನಸ್ ಮೆಕಾಡಮ್ ಮತ್ತು 25 ಎಂಎಂ ಅರೆ ದಪ್ಪವಾದ ಬಿಟುಮಿನಸ್ ಕಾಂಕ್ರೀಟ್ (ಎಸ್‌ಡಿಬಿಸಿ) ಪದರವನ್ನು ಒದಗಿಸಲು ನಿರ್ದೇಶಿಸಿದ್ದರು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಸಿಇ ಅವರ ನಿರ್ದೇಶನವನ್ನು ನಿರ್ಲಕ್ಷಿಸಿ, ಕಲಬುರಗಿ ಮಹಾನಗರ ನಗರ ಪಾಲಿಕೆಯು ಡಿಬಿಎಂನೊಂದಿಗೆ ಕಾಮಗಾರಿಗಳನ್ನು ಕಾರ್ಯಗತಗೊಳಿಸಿತ್ತು. ಸೂಚಿಸಲಾದ 25 ಎಮ್‌ಎಮ್ ಬದಲಿಗೆ 50 ಎಮ್‌ಎಮ್ ಡಿಬಿಎಮ್‌ಅನ್ನು ಕಾರ್ಯಗತಗೊಳಿಸಿದ್ದು ₹0.48 ಕೋಟಿಯ ತಪ್ಪಿಸಬಹುದಾಗಿದ್ದ ಹೆಚ್ಚುವರಿ ವೆಚ್ಚದಲ್ಲಿ ಪರಿಣಮಿಸಿತು (**ಅನುಬಂಧ 4.3**).

[17] ಕಲಬುರಗಿ ವಿಮಾನ ನಿಲ್ದಾಣ ರಸ್ತೆ ಸಂಪರ್ಕ ಪ್ಯಾಕೇಜ್–ಸೇಡಂ ರಸ್ತೆ (ಅನ್ನಪೂರ್ಣ ಆಸ್ಪತ್ರೆಯಿಂದ ಖರ್ಗೆ ಪೆಟ್ರೋಲ್ ಪಂಪ್‌ವರೆಗೆ ಮತ್ತು ಕಲಬುರಗಿ ವಿಮಾನ ನಿಲ್ದಾಣ ಸಂಪರ್ಕ ಪ್ಯಾಕೇಜ್– ರಾಜಾಪುರ ರಸ್ತೆ ಆರ್‌ಟಿಒ ಕ್ರಾಸ್‌ನಿಂದ ಶಹಾಬಾದ್ ರಿಂಗ್ ರಸ್ತೆವರೆಗೆ.

ರಾಷ್ಟ್ರೀಯ ಹೆದ್ದಾರಿಗೆ ಸಂಪರ್ಕ ಕಲ್ಪಿಸುವ ಆ ರಸ್ತೆಯಲ್ಲಿ ಹೆಚ್ಚಿನ ಸಂಚಾರ ದಟ್ಟಣೆಯಿರುವುದರಿಂದ ಮೂಲ ಅಂದಾಜಿನಂತೆಯೇ 50 ಎಮ್‌ಎಮ್ ಡಿಬಿಎಮ್ ಮತ್ತು 25 ಎಮ್‌ಎಮ್ ದಪ್ಪದ ಎಸ್‌ಡಿಬಿಸಿ ಒದಗಿಸುವುದನ್ನು ಉಳಿಸಿಕೊಳ್ಳಲು ಮಂಡಳಿಯ ಅಧಿಕಾರಿಗಳೊಂದಿಗೆ ಕಲಬುರಗಿ ಮಹಾನಗರ ಪಾಲಿಕೆಯ ಆಯುಕ್ತರು ನಡೆಸಿದ ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು ಎಂದು ಮಹಾನಗರ ಪಾಲಿಕೆಯು ತಿಳಿಸಿತು. ಆದರೆ, ಈ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಯಾವುದೇ ಸಂಚಾರ ದಟ್ಟಣೆ ಸಮೀಕ್ಷೆ ನಡೆಸಿರಲಿಲ್ಲ ಎಂಬುದನ್ನ ಲೆಕ್ಕಪರಿಶೋಧನೆಯು ಗಮನಿಸಿತು.

➢ ಕೆಆರ್‌ಐಡಿಎಲ್ ಕಲಬುರಗಿ ವಿಭಾಗವು 2014–15ರ ಅವಧಿಯ ವಾರ್ಷಿಕ ಕಾರ್ಯ ಯೋಜನೆಯಲ್ಲಿದ್ದ ಕಲಬುರಗಿಯ ಚಿತ್ತಾಪುರ ತಾಲೂಕಿನ ವಾಡಿಯಿಂದ ಬಲವಾಡಗಿ ಗ್ರಾಮಕ್ಕೆ 5,870 ಕಿ.ಮೀ.ವರೆಗಿನ ರಸ್ತೆಯನ್ನು ₹2.59 ಕೋಟಿ ಅಂದಾಜು ವೆಚ್ಚದಲ್ಲಿ 2016–17ರ ಅವಧಿಯಲ್ಲಿ ಸುಧಾರಣಾ ಕಾಮಗಾರಿಗಳನ್ನು ಕಾರ್ಯಗತಗೊಳಿಸಿತು. ಎಸ್‌ಡಿಬಿಸಿಗೆ ಅಂದಾಜನ್ನು ತಯಾರಿಸಲಾಗಿತ್ತು ಮತ್ತು ಕಲಬುರಗಿ ವೃತ್ತದ ಪಿಡಬ್ಲ್ಯುಡಿ ದರಗಳ ಪ್ರಕಾರ ₹98.31 ಪಾವತಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ವಿಶಿಷ್ಟತೆಗಳ ಕಂಡಿಕೆ–15.3.7ರ ಪ್ರಕಾರ ಪೂರ್ವ ಮಿಶ್ರ ಕಾರ್ಪೆಟ್‌ಅನ್ನು ಮೇಲ್ಮೈ ಕೋರ್ಸ್‌ಆಗಿ ಹಾಕಲು ಶಿಫಾರಸು ಮಾಡಲಾಗಿತ್ತು. ಅಲ್ಲದೆ, ಪೂರ್ವ ಮಿಶ್ರಣ ಕಾರ್ಪೆಟ್‌ಅನ್ನು ಸೀಲಿಂಗ್ ಮಾಡಲು 6 ಎಮ್‌ಎಮ್ ದಪ್ಪ ಟೈಪ್ ಬಿ ಸೀಲ್ ಕೋಟ್ ಅನ್ನು ಶಿಫಾರಸು ಮಾಡಲಾಗಿತ್ತು. ಆದರೆ, ಐಟಂ ಸಂಖ್ಯೆ.7ರ ಅಡಿಯಲ್ಲಿ ಅಂದಾಜಿನ ಪ್ರಕಾರ ಅರೆ ದಟ್ಟವಾದ ಬಿಟುಮಿನಸ್ ಕಾಂಕ್ರೀಟ್ ಅನ್ನು ಪಿಡಬ್ಲ್ಯುಡಿ ಡಿಎಸ್‌ಆರ್ [18] 2014–15ರ ಪ್ರಕಾರ ಪಿಆರ್‌ಇಡಿ ಐಟಂ ಸಂಖ್ಯೆ.5.9 ಮತ್ತು 5.12 (II) ಅಡಿಯಲ್ಲಿ ಓಪನ್ ಗ್ರೇಡೆಡ್ ಪ್ರಿ–ಮಿಕ್ಸ್ ಕಾರ್ಪೆಟ್‌ಗೆ ಪ್ರತಿಯಾಗಿ (ಪ್ರತಿ ಚದರ ಅಡಿಗೆ ₹189 ರಂತೆ) ಒದಗಿಸಲಾಗಿತ್ತು. ಇದು ಹಳ್ಳಿಯ ರಸ್ತೆಗೆ ಹೆಚ್ಚು ಮಿತವ್ಯಯಕಾರಿಯಾಗಿತ್ತು. 550.31 ಚದರ ಮೀಟರ್‌ಗೆ ದರಗಳು. ₹1,04,009 ಆಗುತ್ತದೆ. ಎಸ್‌ಡಿಬಿಸಿಗೆ ಸಂಬಂಧಿಸಿದಂತೆ ಅಂದಾಜಿನಲ್ಲಿ ಮಾಡಲಾದ ನಿಬಂಧನೆಯಿಂದಾಗಿ, ಅಂದಾಜುಗಳನ್ನು ಹೆಚ್ಚಿಸಲಾಗಿದ್ದು ₹53.06 ಲಕ್ಷ ಹೆಚ್ಚುವರಿ ಪಾವತಿಯಲ್ಲಿ ಪರಿಣಮಿಸಿತು.

### *4.2.17 ಕೆಆರ್‌ಐಡಿಎಲ್‌ನಿಂದ ಗ್ರಾಮೀಣ ರಸ್ತೆ ಕಾಮಗಾರಿಗಳಿಗೆ ಹೆಚ್ಚಿನ ದರದ ದರಪಟ್ಟಿಯ ಅಳವಡಿಕೆ*

ಗ್ರಾಮೀಣ ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಂಡಾಗ ಏಜೆನ್ಸಿಗಳು/ಇಲಾಖೆಗಳು ಗ್ರಾಮೀಣ ರಸ್ತೆಗಳಿಗೆ ಆಯಾ ವರ್ಷಗಳ ಪಿಆರ್‌ಇಡಿ ದರಪಟ್ಟಿಯ ದರಗಳನ್ನು ಅಳವಡಿಸಿಕೊಂಡು ಅಂದಾಜುಗಳನ್ನು ಸಿದ್ಧಪಡಿಸಬೇಕೆಂದು ಸರ್ಕಾರವು ಸೂಚನೆಗಳನ್ನು ನೀಡಿತ್ತು (ಮೇ 2008). ಕಲಬುರಗಿ ಸರ್ಕಲ್ ಪಂಚಾಯತ್ ರಾಜ್ ಎಂಜಿನಿಯರಿಂಗ್ ವಿಭಾಗದ (ಪಿಆರ್‌ಇಡಿ) ಸೂಪರಿಂಟೆಂಡಿಂಗ್ ಇಂಜಿನಿಯರ್ ಸಹ ಇದೇ ರೀತಿಯ ಸೂಚನೆಗಳನ್ನು ನೀಡಿದ್ದರು (ಡಿಸೆಂಬರ್ 2016).

ಹತ್ತು ಕಾಮಗಾರಿಗಳಲ್ಲಿ ಪಿಆರ್‌ಇಡಿ ದರಗಳಿಗಿಂತ ಅಧಿಕವಾಗಿದ್ದ ಲೋಕೋಪಯೋಗಿ ದರಪಟ್ಟಿಯ ದರಗಳನ್ನು ಸಂಸ್ಥೆಯು ಅಳವಡಿಸಿಕೊಂಡಿತ್ತು ಎಂಬುದನ್ನು ಕೆಆರ್‌ಐಡಿಎಲ್‌ಗೆ ವಹಿಸಲಾದ ಪರೀಕ್ಷಾ–ತನಿಖೆ ನಡೆಸಿದ 40 ಕಾಮಗಾರಿಗಳ ವಿಶ್ಲೇಷಣೆಯು ತಿಳಿಯಪಡಿಸಿತು. ರಸ್ತೆಗಳನ್ನು ಹಳ್ಳಿಯ ರಸ್ತೆಗಳೆಂದು ವರ್ಗೀಕರಿಸಿದ್ದರಿಂದ ಹೆಚ್ಚಿನ ದರಗಳ ತಪ್ಪಾದ ಅಳವಡಿಕೆಯು ಏಜೆನ್ಸಿಗೆ ಅನಗತ್ಯ ಲಾಭದಲ್ಲಿ ಮತ್ತು **ಅನುಬಂಧ–4.4**ರಲ್ಲಿ ತಿಳಿಸಿರುವಂತೆ, ₹1.09 ಕೋಟಿ ಮೊತ್ತದ ಹೆಚ್ಚುವರಿ ತಪ್ಪಿಸಬಹುದಾಗಿದ್ದ ವೆಚ್ಚದಲ್ಲಿ ಪರಿಣಮಿಸಿತು

[18] ಲೋಕೋಪಯೋಗಿ ಇಲಾಖೆಯ ಕರಡು ದರಪಟ್ಟಿಗಳ ದರಗಳು (ಡಿಎಸ್‌ಆರ್)

### *4.2.18 ರಸ್ತೆ ಕಾಮಗಾರಿಗಳಿಗೆ ಒಡ್ಡು ನಿರ್ಮಾಣದಲ್ಲಿ ಅಗೆದ ಮಣ್ಣನ್ನು ಬಳಸದಿರುವುದು*

ಉತ್ಖನನದಿಂದ ಪಡೆದ ಮಣ್ಣನ್ನು ರಸ್ತೆ ಕಾಮಗಾರಿ ಮಾಡುವಾಗ ಒಡ್ಡು, ಉಪ ದರ್ಜೆ ಮತ್ತು ಮಣ್ಣಿನ ಭುಜದ ನಿರ್ಮಾಣಕ್ಕೆ ಬಳಸಬೇಕಾಗಿತ್ತು. ಒಂದು ವೇಳೆ ಒಡ್ಡು ನಿರ್ಮಾಣಕ್ಕೆ ಉತ್ಖನನದ ಮಣ್ಣು ಸಾಕಷ್ಟಿಲ್ಲದಿದ್ದಲ್ಲಿ ಎರವಲು ಹೊಂಡದಿಂದ ಮಣ್ಣನ್ನು ತರುವ ವ್ಯವಸ್ಥೆ ಮಾಡಲು ಗುತ್ತಿಗೆದಾರರಿಗೆ ಅನುಮತಿ ನೀಡಲಾಗುವುದು. ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿ ನೀಡುವಾಗ ಈ ಸೂಚನೆಗಳನ್ನು ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನಿಯರ್/ಸೂಪರ್‌ಟೆಂಡಿಂಗ್ ಇಂಜಿನಿಯರ್‌ಗಳು ಅನುಷ್ಠಾನ ಏಜೆನ್ಸಿಗಳಿಗೆ ತಿಳಿಸುತ್ತಾರೆ.

ರಸ್ತೆ ಕಾಮಗಾರಿಗಳಿಗೆ ಅಂದಾಜುಗಳನ್ನು ತಯಾರಿಸುವಾಗ ಕಾಮಗಾರಿ ಸ್ಥಳದಲ್ಲಿ ಉತ್ಖನನದಿಂದ ದೊರೆಯುವ ಮಣ್ಣಿನ ಪ್ರಮಾಣವನ್ನು ಲೆಕ್ಕ ಹಾಕಬೇಕು ಮತ್ತು ಅಗತ್ಯವಿರುವ ಮಣ್ಣಿನ ಬಾಕಿ ಪ್ರಮಾಣವನ್ನು ಎರವಲು ಹೊಂಡದಿಂದ ಪಡೆಯಲು ಮಾತ್ರ ಅಂದಾಜಿನಲ್ಲಿ ಅವಕಾಶ ಮಾಡಬೇಕು.

ಐದು ಕಾಮಗಾರಿಗಳಿಗೆ ಸಂಬಂಧಿಸಿದಂತೆ ರಸ್ತೆ ಸ್ಥಳದಲ್ಲಿ ಲಭ್ಯವಿರುವ ಮಣ್ಣಿನ ಪ್ರಮಾಣವನ್ನು ಅನುಷ್ಠಾನ ಸಂಸ್ಥೆಗಳು ಪರಿಗಣಿಸದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಮಣ್ಣಿನ ಪ್ರಮಾಣವನ್ನು ಪರಿಗಣಿಸದಿರುವುದು, **ಅನುಬಂಧ-4.5ರಲ್ಲಿ** ವಿವರಿಸಿದಂತೆ ₹0.87 ಕೋಟಿಯ ತಪ್ಪಿಸಬಹುದಾಗಿದ್ದ ಹೆಚ್ಚುವರಿ ವೆಚ್ಚದಲ್ಲಿ ಪರಿಣಮಿಸಿತು.

ಅಂದಾಜಿನಲ್ಲಿನ ಪ್ರಮಾಣಗಳ ಅವಕಾಶವು ತಾತ್ಪೂರ್ತಿಕವಾಗಿರುತ್ತದೆ ಮತ್ತು ಯೋಜನಾ ವರದಿಯ ಪ್ರಕಾರ ಮಣ್ಣಿನ ಸಿಬಿಆರ್ ಮೌಲ್ಯವು ಶೇಕಡಾ ಎಂಟರಷ್ಟಿತ್ತು ಎಂದು ಸರ್ಕಾರವು ತಿಳಿಸಿತು (ಜುಲೈ 2022). ಆದರೆ, ಕಾರ್ಯಗತಗೊಳಿಸುವ ಸಮಯದಲ್ಲಿ ಕಪ್ಪು ಹತ್ತಿಮಣ್ಣು (ಬಿಸಿ) ದೊರಕಿದ್ದು ಕಪ್ಪು ಹತ್ತಿ ಮಣ್ಣನ್ನು ಒಡ್ಡು ಹಾಕಲು ಮರುಬಳಕೆ ಮಾಡಲು ಸಾಧ್ಯವಾಗದ ಕಾರಣ ಎರವಲು ಪಡೆದ ಮಣ್ಣನು ಬಳಸಲಾಗಿದೆ ಎಂದೂ ಕೂಡ ತಿಳಿಸಲಾಯಿತು.

ಲಭ್ಯವಿದ್ದ ಮಣ್ಣು ಉಪಯೋಗಿಸಲು ಯೋಗ್ಯವಲ್ಲ ಎಂದು ಸೂಚಿಸುವ ಯಾವುದೇ ಮಣ್ಣು ವಿಶ್ಲೇಷಣಾ ವರದಿಗಳನ್ನು ಒದಗಿಸದಿರುವುದರಿಂದ ಉತ್ತರವನ್ನು ಒಪ್ಪಲು ಸಾಧ್ಯವಿಲ್ಲ.

### *4.2.19 ಅಸ್ತಿತ್ವದಲ್ಲಿರುವ ರಸ್ತೆಗಳಲ್ಲಿ ಗ್ರ್ಯಾನ್ಯುಲರ್ ಸಬ್-ಬೇಸ್‌ಅನ್ನು ಕಾನೂನು ಬಾಹಿರವಾಗಿ ಒದಗಿಸುವುದು*

ಗ್ರ್ಯಾನ್ಯುಲರ್ ಸಬ್-ಬೇಸ್ (ಜಿಎಸ್‌ಬಿ) ಎಂಬುದು ರಸ್ತೆಯ ಉಪ-ದರ್ಜೆಯ ಪದರದ ಮೇಲೆ ಒದಗಿಸಲಾದ ಪದರವಾಗಿದೆ. ಮೇಲ್ದರ್ಜೆಗೇರಿಸಲು ಕೈಗೆತ್ತಿಕೊಂಡಿರುವ ಅಸ್ತಿತ್ವದಲ್ಲಿರುವ ರಸ್ತೆಯ ಸ್ಥಿತಿಯು ಬಿಟುಮಿನಸ್ ಮೇಲ್ಮೈಯಾಗಿದ್ದರೆ, ಜಿಎಸ್‌ಬಿ ಪದರವನ್ನು ಒದಗಿಸುವ ಅಗತ್ಯವಿಲ್ಲ ಮತ್ತು 50 ಎಮ್‌ಎಮ್ ನಿಂದ 150 ಎಮ್‌ಎಮ್‌ವರೆಗಿನ ಬಿಟುಮಿನಸ್ ಪದರವನ್ನು ಸ್ಕೇರಿಫೈಡ್ ಐಟಂಅನ್ನು ಮಾತ್ರ ಒದಗಿಸಬಹುದು.

ಆದರೆ, ನಾಲ್ಕು ರಸ್ತೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಬಿಟುಮಿನಸ್ ಸ್ಕೇರಿಫೈಡ್ ರಸ್ತೆಗಳಲ್ಲಿ ಜಿಎಸ್‌ಬಿ ಐಟಂ ಒದಗಿಸಲಾಗಿರುವುದನ್ನು ಮತ್ತು ಗುತ್ತಿಗೆದಾರರಿಗೆ ₹1.21 ಕೋಟಿ ಪಾವತಿ ಮಾಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. ಇದು ಕಾನೂನು ಬಾಹಿರವಾಗಿತ್ತು. ವಿವರಗಳನ್ನು **ಅನುಬಂಧ-4.6**ರಲ್ಲಿ ನೀಡಲಾಗಿದೆ.

ರಸ್ತೆ ಸಂಪೂರ್ಣವಾಗಿ ಹದಗೆಟ್ಟಿತ್ತು ಮತ್ತು ಬೇಸ್ ಮತ್ತು ಉಪ-ಬೇಸ್‌ಗಳನ್ನು ಹೊಂದಿರಲಿಲ್ಲವಾದ್ದರಿಂದ ಅದನ್ನು ಅಂದಾಜಿನಲ್ಲಿ ಸೇರಿಸಲಾಯಿತು ಎಂದು ಸರ್ಕಾರವು ತಿಳಿಸಿತು (ಜುಲೈ 2022).

ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಮೊದಲು ಮಣ್ಣಿನ ಸ್ಥಿತಿಯ ಬಗ್ಗೆ ಯಾವುದೇ ಪ್ರಾಥಮಿಕ ಅಧ್ಯಯನ ವರದಿಗಳನ್ನು ಒದಗಿಸದಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

### *4.2.20 ಕೆಆರ್‌ಐಡಿಎಲ್‌ಗೆ 4(ಜಿ) ವಿನಾಯಿತಿಯಿಲ್ಲದೇ ಕಾಮಗಾರಿಗಳ ವಹಿಸುವಿಕೆ*

ಕರ್ನಾಟಕ ಸಾರ್ವಜನಿಕ ಖರೀದಿಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯಿದೆ, 1999 (ಕಾಯಿದೆ) ಸರಕು ಮತ್ತು ಸೇವೆಗಳ ಖರೀದಿಗೆ ಟೆಂಡರ್ ಮಾಡುವ ವಿಧಾನವನ್ನು ನಿಗದಿಪಡಿಸಿದೆ ಮತ್ತು ಕೆಲವು ವಿನಾಯಿತಿಗಳನ್ನು ಅನುಮತಿಸಿದೆ. ಕಟ್ಟಡ ಕಾಮಗಾರಿಗಳು, ರಸ್ತೆ ಕಾಮಗಾರಿಗಳು ಮತ್ತು ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಕಾಮಗಾರಿಗಳು ಸೇರಿದಂತೆ ಎಲ್ಲಾ ಸಂಬಂಧಿತ ವಿದ್ಯುತ್ ಕಾಮಗಾರಿಗಳ ನಿರ್ಮಾಣ ಮತ್ತು ನಿರ್ವಹಣಾ ಕಾಮಗಾರಿಗಳನ್ನು ಕೈಗೊಳ್ಳಲು ಕೆಆರ್‌ಐಡಿಎಲ್‌ಗೆ ಕಾಯಿದೆಯ ಕಲಂ–4(ಜಿ) ಅಡಿಯಲ್ಲಿ ಸರ್ಕಾರವು ವಿನಾಯಿತಿ ನೀಡಿದೆ (ಮೇ 2019). ತರುವಾಯ, 12ನೇ ಮಾರ್ಚ್ 2020 ರಿಂದ ಜಾರಿಗೆ ಬರುವಂತೆ 4(ಜಿ) ಅಡಿಯಲ್ಲಿ ವಿನಾಯಿತಿ ನೀಡುವ ಸರ್ಕಾರಿ ಆದೇಶದಲ್ಲಿ ನೀಡಲಾದ ವಿನಾಯಿತಿಯನ್ನು ಜಾರಿಗೆ ತರಬೇಕಾಗಿಲ್ಲ ಎಂದು ಗೌರವಾನ್ವಿತ ಉಚ್ಚ ನ್ಯಾಯಾಲಯವು ನಿರ್ದೇಶಿಸಿತು (ಜೂನ್ 2020).

ಕೆಆರ್‌ಐಡಿಎಲ್ ಕಲಬುರಗಿ ಮತ್ತು ರಾಯಚೂರು ವಿಭಾಗಗಳು 2020–21ನೇ ಅವಧಿಯಲ್ಲಿ ಕ್ರಮವಾಗಿ ಒಂಬತ್ತು ಮತ್ತು ಎಂಟು ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದನ್ನು ಗಮನಿಸಲಾಯಿತು. ಈ 17 ಕಾಮಗಾರಿಗಳ ಪೈಕಿ 12 ಕಾಮಗಾರಿಗಳು ಪ್ರಗತಿಯಲ್ಲಿದ್ದವು (ಮಾರ್ಚ್ 2022) ಮತ್ತು ಒಟ್ಟು ₹5.54 ಕೋಟಿ ಅಂದಾಜು ವೆಚ್ಚದ ಐದು ಕಾಮಗಾರಿಗಳು ಇನ್ನೂ ಪ್ರಾರಂಭವಾಗಬೇಕಿದೆ.

ಉಚ್ಚ ನ್ಯಾಯಾಲಯದ ಆದೇಶದಂತೆ 2020–21ನೇ ಅವಧಿಯಲ್ಲಿ ಎಲ್ಲಾ ಇಲಾಖೆಗಳಿಗೆ 4(ಜಿ) ವಿನಾಯಿತಿಯನ್ನು ಹಿಂಪಡೆಯಲಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದಾಗ್ಯೂ, ಕೆಆರ್‌ಐಡಿಎಲ್ 2020–21ರ ಅವಧಿಯಲ್ಲಿ ಕೆಕೆಆರ್‌ಡಿಬಿ ನಿಧಿಯಡಿಯಲ್ಲಿ 17 ಕಾಮಗಾರಿಗಳನ್ನು ಕೈಗೆತ್ತಿಕೊಂಡಿತ್ತು. ಮುಕ್ತ ಟೆಂಡರ್‌ನಲ್ಲಿ ಭಾಗವಹಿಸದೆ ನೇರವಾಗಿ ಕಾಮಗಾರಿಗಳನ್ನು ಕಾರ್ಯಗತಗೊಳಿಸಿರುವುದು ಉಚ್ಚ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿದಂತಾಯಿತು. ಕೆಟಿಪಿಪಿ ಕಾಯಿದೆ 1999ರ ನಿಬಂಧನೆ 4(ಜಿ) ಅಡಿಯಲ್ಲಿ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಏಜೆನ್ಸಿ ಅರ್ಹವಾಗಿದೆಯೇ ಎಂಬುದನ್ನು ಪರಿಶೀಲಿಸದೆಯೇ ಮಂಡಳಿಯು ಏಜೆನ್ಸಿಗೆ ಮುಂಗಡವಾಗಿ ಶೇಕಡಾ 80ರಷ್ಟು ಹಣವನ್ನು ಬಿಡುಗಡೆ ಮಾಡಿದ್ದು, **ಅನುಬಂಧ–4.7**ರಲ್ಲಿ ವಿವರಿಸಿದಂತೆ, ಏಜೆನ್ಸಿಗೆ ಅನಪೇಕ್ಷಿತ ಒಲವು ತೋರುವುದರಲ್ಲಿ ಪರಿಣಮಿಸಿತು.

## 4.3 ಕಳಪೆ ಗುಣಮಟ್ಟದ ಕಾಮಗಾರಿಗಳು

### *4.3.1 ಅನುಷ್ಠಾನ ಏಜೆನ್ಸಿಗಳಿಂದ ಕಳಪೆ ಗುಣಮಟ್ಟದ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ*

ಪಿಎಮ್‌ಜಿಎಸ್‌ವೈ ರಾಯಚೂರು, ಪಿಎಮ್‌ಜಿಎಸ್‌ವೈ ಕಲಬುರಗಿ ಮತ್ತು ಪಿಆರ್‌ಇಡಿ ಕಲಬುರಗಿ, ಈ ಏಜೆನ್ಸಿಗಳು ನಿರ್ವಹಿಸಿದ ಆರು ರಸ್ತೆ ಕಾಮಗಾರಿಗಳಲ್ಲಿ ಕಳಪೆ ಕಾಮಗಾರಿಯ ನಿದರ್ಶನಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು. ನಿರ್ಮಾಣವಾದ ಎರಡು ವರ್ಷಗಳಲ್ಲಿ ರಸ್ತೆ ಹಾಳಾಗಿದ್ದರಿಂದ ಕೆಲವು ಬಾಗಗಳಲ್ಲಿ ಗುಂಡಿಗಳಿದ್ದು ಕಳಪೆ ಗುಣಮಟ್ಟದ ಕಾಮಗಾರಿಯನ್ನು ಕಾಮಗಾರಿಯ ಜಂಟಿ ಭೌತಿಕ ಪರಿಶೀಲನೆಯು ತೋರಿಸಿತು. ವಾಟರ್ ಬೌಂಡ್ ಮೆಕಾಡಮ್ ಗ್ರೇಡ್ IIIರ ಪದರವು ಬಹುತೇಕ ಭಾಗಗಳಲ್ಲಿ ಗೋಚರಿಸಿತು. ರಸ್ತೆಯು ಸಂಚಾರಕ್ಕೆ ಅನುಕೂಲವಾಗಿಲ್ಲದಿದ್ದುದರಿಂದ ಎಲ್ಲಾ ಹವಾಮಾನದಲ್ಲಿಯೂ ಗ್ರಾಮೀಣ ರಸ್ತೆ ಸಂಪರ್ಕ ಸಾಧಿಸುವ ಉದ್ದೇಶವು ವಿಫಲವಾಗಿ, **ಅನುಬಂಧ–4.8ರಲ್ಲಿ** ವಿವರಿಸಿದಂತೆ ನಿರ್ಮಾಣದ ವೆಚ್ಚವು ಫಲಪ್ರದವಾಗಲಿಲ್ಲ.

ಹಾನಿಗೊಳಗಾದ ಬಾಗಿಲುಗಳು, ಬಿರುಕು ಬಿಟ್ಟ ಗೋಡೆಗಳು ಮತ್ತು ಚಾವಣಿ, ಅಪೂರ್ಣ ವಿದ್ಯುತ್ ಮತ್ತು ನೀರು ಸರಬರಾಜು ಕಾಮಗಾರಿಗಳು, ಶೌಚಾಲಯಗಳಲ್ಲಿನ ಸೋರಿಕೆಗಳು, ಒಡೆದ ಗಾಜಿನ ಕಿಟಕಿಗಳು, ಒಡೆದ ನೆಲದ ಹೆಂಚುಗಳು ಮುಂತಾದ ಕಳಪೆ ಗುಣಮಟ್ಟದ ಕಾಮಗಾರಿಗಳನ್ನು ಎಂಟು ಕಟ್ಟಡ ಕಾಮಗಾರಿಗಳ ಜಂಟಿ ಭೌತಿಕ ಪರಿಶೀಲನೆಯ ಸಂದರ್ಭದಲ್ಲಿ ಲೆಕ್ಕಪರಿಶೋಧನೆಯು ಗಮನಿಸಿತು. ವಿವರಗಳನ್ನು **ಅನುಬಂಧ–4.9**ರಲ್ಲಿ ನೀಡಲಾಗಿದೆ.

***ಶಿಫಾರಸು–3:*** *ವಿವಿಧ ಏಜೆನ್ಸಿಗಳಿಗೆ ವಹಿಸಲಾಗಿರುವ ತನ್ನ ಕಾರ್ಯಯೋಜನಾ ಕಾಮಗಾರಿಗಳ ಅನುಷ್ಠಾನದ ಮೇಲೆ ಮಂಡಳಿಯು ಪರಿಣಾಮಕಾರಿ ಮೇಲ್ವಿಚಾರಣೆಯನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ಮಂಡಳಿಯ ಹಣದಿಂದ ರಚಿಸಲಾದ ಸ್ವತ್ತುಗಳ ಅಂತಿಮ ಬಳಕೆಯನ್ನು ಖಚಿತಪಡಿಸಿಕೊಳ್ಳಬೇಕು.*

***ಶಿಫಾರಸು–4:*** *ಮಂಡಳಿಯ ಕಾರ್ಯಯೋಜನೆಯೊಂದಿಗೆ ಕಲ್ಯಾಣ–ಕರ್ನಾಟಕ ಪ್ರದೇಶದಲ್ಲಿ ವಿವಿಧ ಇಲಾಖೆಗಳು/ಸಂಸ್ಥೆಗಳು ಅನುಷ್ಠಾನಗೊಳಿಸಿರುವ ಕಾಮಗಾರಿಗಳು/ಕಾರ್ಯಕ್ರಮಗಳ ವಿಲೀನವನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬಹುದು.*

***ಶಿಫಾರಸು–5:*** *ಯೋಜಿತ ಕಾಮಗಾರಿಗಳ ಅನುಷ್ಠಾನದಲ್ಲಿ ವಿಪರೀತ ವಿಳಂಬವಾಗುವ ಸಂದರ್ಭಗಳನ್ನು ತಪ್ಪಿಸಲು ಮಂಡಳಿಯು ನಿಗದಿತ ಕಾಲಾವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸುವುದನ್ನು ಖಚಿತಪಡಿಸಿಕೊಳ್ಳಬೇಕು.*

***ಶಿಫಾರಸು–6:*** *ಮಂಡಳಿಯ ಕಾರ್ಯ ಯೋಜನೆಯೊಂದಿಗೆ ಪ್ರದೇಶದಲ್ಲಿ ವಿವಿಧ ಇಲಾಖೆಗಳು/ಸಂಸ್ಥೆಗಳು ಅನುಷ್ಠಾನಗೊಳಿಸಿರುವ ಕಾಮಗಾರಿಗಳು/ಕಾರ್ಯಕ್ರಮಗಳ ವಿಲೀನವನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು.*